<table>
<tr><th rowspan="2">ಅವಧಿ</th><th rowspan="2">ಸಮಯ ಹಂಚಿಕೆ</th><th colspan="5">ಎರಡನೇ ತರಗತಿ</th><th colspan="5">ಮೂರನೇ ತರಗತಿ</th></tr>
<tr><th>ವಿಷಯ ಮತ್ತು ಪಾಠದ ಹೆಸರು</th><th>ಸಾಮರ್ಥ್ಯದ ವಿವರ</th><th>ಬೋಧನೋಪಕರಣ ಕಲಿಕಾ ಸಾಮಗ್ರಿಗಳು</th><th>ವಿಧಾನ</th><th>ಕಲಿಕಾ ಪ್ರಕ್ರಿಯೆ</th><th>ವಿಷಯ ಮತ್ತು ಪಾಠದ ಹೆಸರು</th><th>ಸಾಮರ್ಥ್ಯದ ವಿವರ</th><th>ಬೋಧನೋಪಕರಣ ಕಲಿಕಾ ಸಾಮಗ್ರಿಗಳು</th><th>ವಿಧಾನ</th><th>ಕಲಿಕಾ ಪ್ರಕ್ರಿಯೆ</th></tr>
<tr><td>1</td><td>2</td><td>3</td><td>4</td><td>5</td><td>6</td><td>7</td><td>8</td><td>9</td><td>10</td><td>11</td><td>12</td></tr>
<tr><td rowspan="6">1ನೇ</td><td>10 ನಿ</td><td rowspan="6">ಕನ್ನಡ<br>ಲಚ್ಚಿಯ ಮೆಚ್ಚಿನ ದೋಣಿ</td><td rowspan="6">* ಸಂಯುಕ್ತಾಕ್ಷರಗಳು, ಪದಗಳು ಮತ್ತು ವಾಕ್ಯಗಳನ್ನು ನಕಲು ಮಾಡುವರು.<br>* ಪಾಠದಲ್ಲಿನ ಒತ್ತಕ್ಷರಗಳನ್ನು ಉಚ್ಚರಿಸುವರು.</td><td rowspan="6">ಪಠ್ಯಪುಸ್ತಕ, ಪದ್ಯದ ಚಾರ್ಟ್</td><td>ಶಿಕ್ಷಕ</td><td><u>ಪೂರ್ವ ಸಿದ್ಧತಾ ಚಟುವಟಿಕೆ :</u> ಹಿಂದಿನ ತರಗತಿಯ ಮುಂದುವರಿದ ಭಾಗ ಚುಕ್ ಬುಕ್ ನಮ್ಮ ಅತ್ತೆ ಬಲು ಜಾಣೆ. ದಿನಾಲು ಚಪಾತಿ ಸೀಕರಣೆ. ಚಪಾತಿ ಸೀಕರಣೆ ತಿನ್ನೋಣ. ಮಾವನ ಮನೆಗೆ ಹೋಗೋಣ. ಹಾಡನ್ನು ಹಾಡಿಸುವರು.</td><td></td><td rowspan="6">* ಬೇರೆ ಮಕ್ಕಳು ಬರೆದಿರುವುದನ್ನು ಓದುವರು.<br>* ಎಂದು ಪಠ್ಯವನ್ನು ಓದಿದ ಮೇಲೆ ಯಾರು ಯಾವಾಗ ಎಲ್ಲಿ ಮತ್ತು ಏನು ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥರಾಗುವರು.</td><td rowspan="6">ಪಠ್ಯಪುಸ್ತಕ, ಪದ್ಯದ ಚಾರ್ಟ್</td><td>ಶಿಕ್ಷಕ</td><td><u>ಪೂರ್ವ ಸಿದ್ಧತಾ ಚಟುವಟಿಕೆ :</u> 2ನೇ ತರಗತಿಯೊಂದಿಗೆ 3ನೇ ತರಗತಿಯವರು ಚಟುವಟಿಕೆಯಲ್ಲಿ ಭಾಗವಹಿಸುವರು.</td></tr>
<tr><td>5 ನಿ</td><td></td><td>ಶಿಕ್ಷಕರು ಹಿರೇಮಣಿಗೆ ಮಕ್ಕಳಿಂದ ಪಾಠವನ್ನು ಓದಿಸಲು ಸೂಚನೆ ನೀಡುವರು.</td><td rowspan="5">ಕನ್ನಡ<br>ಗಗನ ಗುಡಿ</td><td></td><td>ಮುಂದಿನ ಪಾಠಕ್ಕೆ ಅಣಿಗೊಳಿಸುವರು.</td></tr>
<tr><td>25 ನಿ</td><td>ಹಿರೇಮಣಿ</td><td>ಶಿಕ್ಷಕರ ಸೂಚನೆಯಂತೆ ಮಕ್ಕಳು ಹಿರೇಮಣಿ ಸಹಾಯದಿಂದ ಪಾಠವನ್ನು ಓದುವರು. ಹಿರೇಮಣಿಯು ಮಕ್ಕಳಿಗೆ ಪಾಠವನ್ನು ಓದಲು ಸಹಾಯ ಮಾಡುವರು.</td><td>ಶಿಕ್ಷಕ</td><td><u>ಕಲಿಕಾಂಶ ಚಟುವಟಿಕೆ :</u> ಹಿಂದಿನ ಅವಧಿಯಲ್ಲಿ ಹಾಕಿದ ಪದ್ಯದ ಚಾರ್ಟುಗಳನ್ನು ತೂಗುಹಾಕಿ, ಮಕ್ಕಳು ಬರೆದ ಪದ್ಯಗಳನ್ನು ಅದಲು ಬದಲು ಮಾಡಿ ಓದಿಸುವರು.</td></tr>
<tr><td>10 ನಿ</td><td></td><td>ಶಿಕ್ಷಕರು ಈ ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು.</td><td></td><td>ಮುಂದಿನ ಚಟುವಟಿಕೆ ಮಾಡಲು ಹಿರೇಮಣಿಗೆ ಸೂಚನೆ ನೀಡುವರು.</td></tr>
<tr><td>25 ನಿ</td><td>ಶಿಕ್ಷಕ</td><td><u>ಕಲಿಕಾಂಶ ಚಟುವಟಿಕೆ :</u> ಶಿಕ್ಷಕರು ಲಚ್ಚಿಯ ಮೆಚ್ಚಿನ ದೋಣಿ ಪಾಠವನ್ನು ಒತ್ತಕ್ಷರಗಳಿಗೆ ಒತ್ತುಕೊಟ್ಟು ಓದಿ ಮಕ್ಕಳಿಂದಲೂ ಓದಿಸುವರು.</td><td>ಹಿರೇ ಮಣಿ</td><td>ಹಿರೇಮಣಿ ಸಹಾಯದಿಂದ ಕಲಿಕಾಂಶದ ಚಟುವಟಿಕೆಯನ್ನು ಮುಂದುವರಿಸುವರು.</td></tr>
<tr><td>5 ನಿ</td><td></td><td>ಶಿಕ್ಷಕರು ಪಾಠವನ್ನು ಓದಿ ಮಕ್ಕಳಿಂದಲೂ ಓದಿಸಿದ ನಂತರ ಒತ್ತಕ್ಷರ ಗಳನ್ನು ಬರೆಯಲು ತಿಳಿಸುವರು.</td><td></td><td>ಮಕ್ಕಳು ಮಾಡಿದ ಚಟುವಟಿಕೆಯನ್ನು ಪರಿಶೀಲಿಸುವರು ಮತ್ತು ಮಾರ್ಗ ದರ್ಶನ ನೀಡುವರು.</td></tr>
<tr><td rowspan="6">2ನೇ</td><td>10 ನಿ</td><td rowspan="6">ಗಣಿತ<br>ಸಂಖ್ಯೆಗಳು</td><td rowspan="6">ಕ್ರಮಾಗತ ಸಂಖ್ಯೆಗಳು ಮತ್ತು ಕ್ರಮ ಸೂಚಕಗಳನ್ನು ಗುರುತಿಸುವರು.</td><td rowspan="6">ಮಕ್ಕಳು ಎದುರು ರೀತಿಯ ವಸ್ತುಗಳು (ಬಳಪ, ಪೆನ್ಸಿಲ್, ಚಮಚ, ಹೂ), ಕ್ಯಾಲೆಂಡರ್ ಚಿತ್ರಪಟ, ಕಲ್ಲು, ಬಲೂನು, ತರಗತಿ ಸನ್ನಿವೇಶ</td><td>ಶಿಕ್ಷಕ</td><td><u>ಪೂರ್ವ ಸಿದ್ಧತಾ ಚಟುವಟಿಕೆ :</u> ಚಿನ್ನರಿ, ಚಿನ್ನರಿ, ಚಿನ್ನಾರಿ ಅಭಿನಯ ಗೀತೆಯನ್ನು ಹಾಡಿಸುವರು</td><td rowspan="6">ಗಣಿತ<br>ಸಂಖ್ಯೆಗಳು</td><td rowspan="6">* ಮೊತ್ತವು 999ಕ್ಕೆ ಮೀರದಂತೆ ದಶಕವಲ್ಲದ ಹಾಗು ದಶಕವರು ಹಾಗೆ ಮೂರು ಅಂಕಿಗಳುಳ್ಳ ಎರಡು ಅಥವಾ ಮೂರು ಸಂಖ್ಯೆಗಳ ಸಂಕಲನ ಮಾಡುವರು.<br>* ನಿತ್ಯ ಜೀವನದ ಸರಳ ಸಂಕಲನ ಸಮಸ್ಯೆಗಳನ್ನು ಬಿಡಿಸುವರು.</td><td rowspan="6">ಕಡ್ಡಿಗಳು, ಗೋಲಿಗಳು, ಕಟ್ಟು, ಹಲಗೆ, ಸಂಖ್ಯಾ ಫಲಕಗಳು.</td><td>ಶಿಕ್ಷಕ</td><td><u>ಪೂರ್ವ ಸಿದ್ಧತಾ ಚಟುವಟಿಕೆ :</u> ಎರಡನೇ ತರಗತಿ ಮಕ್ಕಳ ಜೊತೆಯಲ್ಲಿಯೇ ಚಟುವಟಿಕೆಯಲ್ಲಿ ಭಾಗವಹಿಸುವರು.</td></tr>
<tr><td>5 ನಿ</td><td></td><td>ಹಿಂದಿನ ದಿನದ ಗಣಿತದ ಚಟುವಟಿಕೆಯನ್ನು ಮುಂದುವರಿಸಿಕೊಂಡು ಹೋಗಲು ಹಿರೇಮಣಿಗೆ ಸೂಚಿಸುವರು.</td><td></td><td>ಮಕ್ಕಳು ಮುಂದಿನ ಚಟುವಟಿಕೆಗೆ ಅಣಿಗೊಳ್ಳುವರು.</td></tr>
<tr><td>25 ನಿ</td><td>ಹಿರೇಮಣಿ</td><td>ಹಿಂದಿನ ದಿನದ ಗಣಿತದ ಚಟುವಟಿಕೆಯನ್ನು ಮುಂದುವರಿಸಿಕೊಂಡು ಹೋಗುವರು.</td><td>ಶಿಕ್ಷಕ</td><td><u>ಕಲಿಕಾಂಶ ಚಟುವಟಿಕೆ :</u> ನೂರರ, ಹತ್ತರ ಕಟ್ಟು ಮಾಡಿರುವ ಮತ್ತು ಬಿಡಿಯಾಗಿ ರುವ ಕಡ್ಡಿಗಳನ್ನು ಬಳಸಿ 125 + 232 ಸಂಕಲನ ಮಾಡುವ ಕ್ರಮ ತಿಳಿಸುವರು. ಇದೇ ರೀತಿ ಬೇರೆ ಬೇರೆ ಸಂಖ್ಯೆಯ ಸಂಕಲನ ಲೆಕ್ಕಗಳನ್ನು ಮಾಡಿ ತೋರಿಸುವರು.
<table>
<tr><th>ನೂ</th><th>ಹ</th><th>ಬಿ</th></tr>
<tr><td>100</td><td>10 10</td><td>111</td></tr>
<tr><td>100<br>100</td><td>10 10<br>10</td><td>11</td></tr>
<tr><td>100<br>100<br>100</td><td>10 10<br>10 10<br>10</td><td>111<br>111<br>1</td></tr>
</table>
<table>
<tr><th>ನೂ</th><th>ಹ</th><th>ಬಿ</th></tr>
<tr><td>1</td><td>2</td><td>5</td></tr>
<tr><td>+ 2</td><td>3</td><td>2</td></tr>
<tr><td>3</td><td>5</td><td>7</td></tr>
</table>
</td></tr>
<tr><td>10 ನಿ</td><td></td><td>ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು.</td><td></td><td>ಮೇಲಿನ ಚಟುವಟಿಕೆಯನ್ನೇ ಮುಂದುವರಿಸಿಕೊಂಡು ಹೋಗಲು ಹಿರೇಮಣಿಗೆ ಸೂಚಿಸುವರು.</td></tr>
<tr><td>25 ನಿ</td><td>ಶಿಕ್ಷಕ</td><td><u>ಕಲಿಕಾಂಶ ಚಟುವಟಿಕೆ :</u> ಪ.ಪು.ದ ಪು.ಸಂ. 51 ರಲ್ಲಿನ ಚಟುವಟಿಕೆ : 1, 2 ಹಾಗು 3ನ್ನು ಮಾಡಿಸುವರು.</td><td>ಹಿರೇಮಣಿ</td><td>ಹಿರೇಮಣಿ ಮೇಲಿನ ಚಟುವಟಿಕೆಯನ್ನು ಮುಂದುವರಿಸುವರು.</td></tr>
<tr><td>5 ನಿ</td><td></td><td></td><td></td><td>ಮಕ್ಕಳು ಮಾಡಿದ ಚಟುವಟಿಕೆಯನ್ನು ಪರಿಶೀಲಿಸುವರು.</td></tr>
</table>

| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 40 ನಿಮಿಷ | ಲಲಿತಕಲೆ (ರಂಗಕಲೆ) | ಕಡ್ಡಿಗೊಂಬೆ ತಯಾರಿಸುವುದು. | ಕಡ್ಡಿಗಳು, ಪ್ರಾಣಿಗಳ ಚಿತ್ರಗಳು, ಅಂಟು, ಸೂಜಿದಾರ | ಶಿ | **ಕಡ್ಡಿಗೊಂಬೆ ತಯಾರಿಸುವುದು** ಬಣ್ಣಗಳಿಂದ ಮುದ್ರಿತವಾದ ಪ್ರಾಣಿಗಳ ಚಿತ್ರಗಳನ್ನು ಹೊಂದಿರುವ ಚಾರ್ಟನ್ನು ತರಗತಿಗೆ ತಂದು ಅವುಗಳನ್ನು ಪ್ರತ್ಯೇಕವಾಗಿ ಕತ್ತರಿಸುವರು. ಕೆ.ಜಿ. ಶೀಟನ್ನು, ಡ್ರಾಯಿಂಗ್‌ಶೀಟ್ ತೆಗೆದುಕೊಂಡು ಆಕಾರಕ್ಕೆ ತಕ್ಕಂತೆ ಕತ್ತರಿಸಿ ಅಂಟಿಸುವುದು. ಇದಕ್ಕೆ ಕಡ್ಡಿಯೊಂದನ್ನು ಅಳವಡಿಸಿ ಹಿಡಿದು ಕೊಳ್ಳಲು ಅನುಕೂಲವಾಗುವಂತೆ ಸೂಜಿದಾರದಿಂದ ಹೊಲೆಯುವುದು. ಉದಾಹರಣೆ : ಹಸು, ಹುಲಿ, ಕರು ಈ ಚಿತ್ರಗಳಿರುವ ಕಡ್ಡಿಗೊಂಬೆಗಳನ್ನು ಉಪಯೋಗಿಸಿಕೊಂಡು "ಗೋವಿನ ಹಾಡು" ಹಾಡಿಗೆ ರೂಪಕಗಳನ್ನು ತಯಾರಿಸಿ ತೋರಿಸುವರು. | ಲಲಿತಕಲೆ (ರಂಗಕಲೆ) | ಕಡ್ಡಿಗೊಂಬೆ ತಯಾರಿಸುವುದು. | ಕಡ್ಡಿಗಳು, ಪ್ರಾಣಿಗಳ ಚಿತ್ರಗಳು ಅಂಟು, ಸೂಜಿದಾರ | ಶಿಕ್ಷಕ | 3ನೇ ತರಗತಿ ಮಕ್ಕಳನ್ನು 2ನೇ ತರಗತಿ ಮಕ್ಕಳ ಜೊತೆ ಕಡ್ಡಿಗೊಂಬೆ ತಯಾರಿಕೆ ಚಟುವಟಿಕೆಯಲ್ಲಿ ತೊಡಗಿಸುವರು. |
| | 40 ನಿ | ರೇಡಿಯೋ ಪಾಠ ಚಿನ್ನರ ಚುಕ್ಕಿ | | ರೇಡಿಯೋ, ಕಪ್ಪು ಹಲಗೆ ಸೀಮೆಸುಣ್ಣ | ಶಿಕ್ಷಕ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ. | ಚಿನ್ನರ ಚುಕ್ಕಿ | | ರೇಡಿಯೋ, ಕಪ್ಪು ಹಲಗೆ ಸೀಮೆಸುಣ್ಣ | ಶಿಕ್ಷಕ | 2ನೇ ತರಗತಿ ಮಕ್ಕಳ ಜೊತೆ ಈ ಮಕ್ಕಳು ರೇಡಿಯೋ ಕಾರ್ಯಕ್ರಮದಲ್ಲಿ ಭಾಗವಹಿಸುವರು. |
| 4ನೇ | 10 ನಿ | ಪರಿಸರ ಅಧ್ಯಯನ ನಮ್ಮ ಸುತ್ತಮುತ್ತ | ಮನುಷ್ಯ ಮತ್ತು ಪರಿಸರದ ಪರಸ್ಪರ ಸಂಬಂಧಗಳನ್ನು ಅರಿಯುವರು. ಸ್ಥಳೀಯ ಪರಿಸರಗಳ ಬಗ್ಗೆ ಮಾಹಿತಿ ಪಡೆಯುವರು. | ಕಾಡಿನ ಚಿತ್ರ ಪಟ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** ಡಿಂಗು ಟಕ್ಕ, ಡಿಂಗು ಟಕ್ಕ, ಡಿಂಗು ಟಕ್ಕ ಡಿಂಗ್ ನಾನು ನೋಡುವೆ ಕಣ್ಣಳಿಂದಲೇ, ನಾನು ಕೇಳುವೆ ಕಿವಿಗಳಿಂದಲೇ, (ಆಡೋಣ ಬಾ ಕೈಪಿಡಿಯ ಸಾಹಿತ್ಯ) ಎಂಬ ಹಾಡನ್ನು ರಾಗವಾಗಿ ಹೇಳಿಕೊಡುವರು. | ಪರಿಸರ ಅಧ್ಯಯನ ನಮ್ಮ ಜ್ಞಾನೇಂದ್ರಿಯಗಳು | ದೇಹದ ಭಾಗಗಳಾದ ಜ್ಞಾನೇಂದ್ರಿಯಗಳನ್ನು ಗುರುತಿಸಲು ಮತ್ತು ಅವುಗಳ ಕಾರ್ಯಗಳನ್ನು ತಿಳಿಯುವುದು. ಜ್ಞಾನೇಂದ್ರಿಯಗಳ ಸ್ವಚ್ಛತೆ ಮತ್ತು ರಕ್ಷಣೆಯ ವಿಧಾನ ಅರಿಯುವರು. | ಜೇಡಿ ಮಣ್ಣು | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** ಡಿಂಗು ಟಕ್ಕ, ಡಿಂಗು ಟಕ್ಕ... ಹಾಡನ್ನು ಹಾಡಿಸುವರು. |
| | 5 ನಿ | | | | | ಮಕ್ಕಳನ್ನು ಮುಂದಿನ ಚಟುವಟಿಕೆಗೆ ಸಿದ್ಧಗೊಳಿಸುವರು. | | | | | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | **ಕಲಿಕಾಂಶ :** ಕಾಡಿನ ಚಿತ್ರಪಟ ಪ್ರದರ್ಶಿಸಿ ಕಾಡಿನಿಂದ ಆಗುವ ಉಪಯೋಗಗಳನ್ನು ಚರ್ಚಿಸುತ್ತಾ ಪಟ್ಟಿ ಮಾಡುವರು. | | | | ಹಿರೇಮಣಿ | ಜೇಡಿಮಣ್ಣಿನಿಂದ ಕಣ್ಣು ಮತ್ತು ಮೂಗಿನ ಮಾದರಿಗಳನ್ನು ಮಾಡಿಸುವರು. |
| | 35 ನಿ | | | | ಶಿಕ್ಷಕ | ಬೆಟ್ಟದ ಚಿತ್ರವನ್ನು ಬರೆದು ಬಣ್ಣ ಹಚ್ಚಲು ತಿಳಿಸುವರು. | | | | ಶಿಕ್ಷಕ | **ಕಲಿಕಾಂಶ :** ಮಕ್ಕಳಿಗೆ ನಾಲಿಗೆಯನ್ನು ತೆಗೆಸಿ ಹಿಡಿದುಕೊಂಡು ಮಾತನಾಡಲು ತಿಳಿಸುವುದು. ನಂತರದ ಅನುಭವಗಳನ್ನು ಚರ್ಚಿಸುತ್ತಾ ನಾಲಿಗೆಯ ಉಪಯೋಗ ಹಾಗೂ ಸ್ವಚ್ಛತೆ, ರಕ್ಷಣೆಯ ಬಗ್ಗೆ ಸೂಚಿಸುವುದು. ವಿವಿಧ ವಸ್ತುಗಳನ್ನು ಮುಟ್ಟಿದಾಗ ಆಗುವ ಅನುಭವಗಳನ್ನು ಚರ್ಚಿಸುತ್ತಾ ಚರ್ಮದ ಉಪಯೋಗ, ರಕ್ಷಣೆಯ ಬಗ್ಗೆ ಚರ್ಚಿಸುವರು. |
| | 5 ನಿ | | | | ಹಿರೇಮಣಿ | ಕೊಟ್ಟ ಚಟುವಟಿಕೆಯನ್ನು ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡುವರು. | | | | | ಚರ್ಮ ಹಾಗೂ ನಾಲಿಗೆಯ ಉಪಯೋಗ ಹಾಗೂ ಸಂರಕ್ಷಣೆಯ ವಿಧಾನವನ್ನು ಪಟ್ಟಿಮಾಡಿ ತರಲು ತಿಳಿಸುವರು. |

**38ನೇ ದಿನ**



| | | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| **1** | **2** | **3** | **4** | **5** | **6** | **7** | **8** | **9** | **10** | **11** | **12** |
| 1ನೇ | 10 ನಿ | ಕನ್ನಡ<br>ಲಚ್ಚಿಯ ಮೆಚ್ಚಿನ ದೋಣಿ | * ಸಂಯುಕ್ತಾಕ್ಷರಗಳು ಪದಗಳು ಮತ್ತು ವಾಕ್ಯಗಳನ್ನು ನಕಲು ಮಾಡುವುದು.<br>* ಭಾಷೆಯಲ್ಲಿನ ಎಲ್ಲಾ ಸ್ವರಗಳನ್ನು ಉಚ್ಛರಿಸುವುದು. | ತಲೆಗಟ್ಟು ತೆಗೆದ ಒತ್ತಕ್ಷರಗಳ ಚಾರ್ಟು | ಶಿಕ್ಷಕ | <u>**ಪೂರ್ವ ಸಿದ್ಧತಾ ಚಟುವಟಿಕೆ :**</u> ಹಿಂದಿನ ತರಗತಿಯ ಚುಕುಬುಕ್ ರೈಲು ಬಂತು ಅಭಿನಯ ಗೀತೆಯನ್ನು ಹಾಡಿಸುವರು. | ಕನ್ನಡ<br>ಗಗನ ಗುಡಿ | * ಬೇರೆ ಮಕ್ಕಳ ಬರವಣಿಗೆಯನ್ನು ಓದುವುದು.<br>* ಒಂದು ಸರಳ ಪಠ್ಯವನ್ನು ಓದಿದ ಮೇಲೆ ಯಾರು ಯಾವಾಗ ಎಲ್ಲಿ ಮತ್ತು ಏನು ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥವಾಗುವುದು. | ಕಥೆ ಪುಸ್ತಕ | ಶಿಕ್ಷಕ | <u>**ಪೂರ್ವ ಸಿದ್ಧತಾ ಚಟುವಟಿಕೆ :**</u> 2ನೇ ತರಗತಿಯೊಂದಿಗೆ 3ನೇ ತರಗತಿಯ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸುವರು. |
| | 5 ನಿ | | | | | ಮುಂದಿನ ಪಾಠಕ್ಕೆ ಅಣಿಗೊಳಿಸುವರು. | | | | | ಕಥೆ ಪುಸ್ತಕವನ್ನು ಓದಿ ಕಥೆಯನ್ನು ಬರೆದು ಅದಲು ಬದಲು ಮಾಡಿ ಓದಲು ಹಿರೇಮಣಿಗೆ ಸೂಚಿಸುವರು. |
| | 25 ನಿ | | | | ಶಿಕ್ಷಕ | ತಲೆಕಟ್ಟು ತೆಗೆದ ಒತ್ತಕ್ಷರಗಳ ಪರಿಚಯ ಮಾಡುವರು ಮತ್ತು ಪದಗಳನ್ನು ಬರೆಸುವರು.<br>ಉದಾ : ಕ್ಕ, ಗ್ಗ, ಫ್ಘ, ಚ್ಚ, ಸ್ಸ,<br>ಅಕ್ಕ, ಹಗ್ಗ, ಅಚ್ಚು, ಬಸ್ಸು. | | | | ಹಿರೇಮಣಿ | ಹಿರೇಮಣಿ ಸಹಾಯದಿಂದ ಕಥೆಪುಸ್ತಕದ ಕಥೆಯನ್ನು ಬರೆಯುವರು. ಬರೆದುದನ್ನು ಮಕ್ಕಳಿಂದ ಅದಲು ಬದಲು ಮಾಡಿ ಓದಿಸುವರು. |
| | 5 ನಿ | | | | | ತಲೆಗಟ್ಟು ತೆಗೆದು ಒತ್ತಕ್ಷರಗಳನ್ನು ಬರೆಯಲು ಹಿರೇಮಣಿಗೆ ತಿಳಿಸುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| | 25 ನಿ | | | | ಹಿರೇಮಣಿ | <u>**ಪುನರ್ಬಲನ ಚಟುವಟಿಕೆ :**</u> ಹಿರೇಮಣಿ ಸಹಾಯದಿಂದ ಮೇಲಿನ ಚಟುವಟಿಕೆಯನ್ನು ಮಾಡುವುದು ಮಕ್ಕಳು ತಲೆಗಟ್ಟು ತೆಗೆದ ಒತ್ತಕ್ಷರಗಳನ್ನು ಬರೆಯುವರು. | | | | ಶಿಕ್ಷಕ | <u>**ಕಲಿಕಾಂಶ ಚಟುವಟಿಕೆ :**</u> ಮಕ್ಕಳು ತಾವು ಓದಿದ ಕಥೆಯನ್ನು ತರಗತಿಯಲ್ಲಿ ಶಿಕ್ಷಕಿಯು ಹೇಳಿಸಿ, ಯಾರು, ಯಾವಾಗ, ಎಲ್ಲಿ, ಏನು ಎಂಬ ಪ್ರಶ್ನೆಗೆ ಉತ್ತರ ಬರುವಂತೆ ಪ್ರಶ್ನೆಗಳನ್ನು ಕೇಳುವರು. |
| | 10 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡುವರು. | | | | | ಮೇಲಿನ ಚಟುವಟಿಕೆ ಮುಂದುವರಿಸಲು ಸೂಚಿಸುವರು. |
| 2ನೇ | 10 ನಿ | ಗಣಿತ<br>ಸಂಖ್ಯೆಗಳು | ಕ್ರಮಾಗತ ಸಂಖ್ಯೆಗಳು ಮತ್ತು ಕ್ರಮ ಸೂಚಕಗಳನ್ನು ಗುರುತಿಸುವುದು. | ವಿವಿಧ ರೀತಿಯ ವಸ್ತುಗಳು (ಬಳಪ, ಪೆನ್ಸಿಲ್, ಚಮಚ, ಹೂ) ಕ್ಯಾಲೆಂಡರ್, ಚಿತ್ರಪಟ, ಕಲ್ಲು, ಬಲೂನು ಹಾಗು ತರಗತಿ ಸನ್ನಿವೇಶ. | ಶಿಕ್ಷಕ | <u>**ಪೂರ್ವ ಸಿದ್ಧತಾ ಚಟುವಟಿಕೆ :**</u> ಒಂದು ಒಂದು ಎರಡು<br>ಶಾಲೆಗೆ ಬೇಗ ಹೊರಡು<br>ಎರಡು ಒಂದು ಮೂರು<br>ಹಾಕು ಹೆಜ್ಜೆ ಜೋರು<br>ಮೂರು ಒಂದು ನಾಲ್ಕು<br>ನಮ್ಮ ಶಾಲೇಲಿ ಗುರುಗಳು ನಾಲ್ಕು<br>ನಾಲ್ಕು ಒಂದು ಐದು<br>ಕಲಿಸದರು ಗುರುಗಳು ಬೈದು ಈ ಅಭಿನಯ ಗೀತೆ ಹಾಡಿಸುವರು. | ಗಣಿತ<br>ಸಂಕಲನ | * ಮೊತ್ತವು 999ಕ್ಕೆ ಮೀರದಂತೆ ದಶಕವಿಲ್ಲೆ ಹಾಗೂ ದಶಕವಿರುವ ಹಾಗೆ ಮೂರು ಅಂಕೆಗಳುಳ್ಳ ಎರಡು ಅಥವಾ ಮೂರು ಸಂಖ್ಯೆಗಳ ಸಂಕಲನ ಮಾಡುವುದು.<br>* ನಿತ್ಯ ಜೀವನದ ಸರಳ ಸಂಕಲನದ ಸಮಸ್ಯೆಗಳನ್ನು ಬಿಡಿಸುವುದು. | ಕಡ್ಡಿಗಳು, ಗೋಲಿಗಳು, ಕಪ್ಪುಹಲಗೆ, ಸಂಖ್ಯಾ ಫಲಕಗಳು, ಬೆಂಕಿಪೊಟ್ಟಣಗಳು. | ಶಿಕ್ಷಕ | <u>**ಪೂರ್ವ ಸಿದ್ಧತಾ ಚಟುವಟಿಕೆ :**</u> ಎರಡನೇ ತರಗತಿ ಮಕ್ಕಳ ಜೊತೆ 3ನೇ ತರಗತಿಯ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸುವರು. |
| | 5 ನಿ | | | | | ಪು.ಸಂ. 51ರಲ್ಲಿನ ಚಟುವಟಿಕೆ ನಿರ್ವಹಿಸಲು ಹಿರೇಮಣಿಗೆ ಸೂಚನೆ ನೀಡುವರು. | | | | | ಮಕ್ಕಳು ಮುಂದಿನ ಚಟುವಟಿಕೆಗೆ ಅಣಿಗೊಳ್ಳುವರು. |
| | 25 ನಿ | | | | ಹಿರೇಮಣಿ | ಶಿಕ್ಷಕರ ಸೂಚನೆಯಂತೆ ಚಟುವಟಿಕೆಯನ್ನು ಮುಂದುವರಿಸಿಕೊಂಡು ಹೋಗುವರು. | | | | ಶಿಕ್ಷಕ | <u>**ಕಲಿಕಾಂಶ ಚಟುವಟಿಕೆ :**</u> ಪ.ಪು.ದ. ಪು.ಸಂ. 55ರಲ್ಲಿರುವ "ವಿಸ್ತರಣಾ ವಿಧಾನದಲ್ಲಿ ಸಂಕಲನ"ದ ಹಂತ 1, ಹಂತ 2, ಹಂತ 3, ಈ ಚಟುವಟಿಕೆಯನ್ನು ಮಾಡಿಸುವರು. |
| | 10 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಮುಂದಿನ ಚಟುವಟಿಕೆ ನಿರ್ವಹಿಸಲು ಹಿರೇಮಣಿಗೆ ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | <u>**ಕಲಿಕಾಂಶ ಚಟುವಟಿಕೆ :**</u> ಕ್ಯಾಲೆಂಡರ್ ಬಳಸಿ ಅದರಲ್ಲಿ ದಿನಗಳನ್ನು ಕ್ರಮಾಗತವಾಗಿ ಸೂಚಿಸುವ ಚಟುವಟಿಕೆ ಮಾಡಿಸುವರು. | | | | ಹಿರೇಮಣಿ | ಮೇಲಿನ ಚಟುವಟಿಕೆಯನ್ನು ಹಿರೇಮಣಿಯ ಸಹಾಯದಿಂದ ಮುಂದುವರಿಸುವರು. |
| | 5 ನಿ | | | | | | | | | | ಮಕ್ಕಳು ಮಾಡಿದ ಚಟುವಟಿಕೆಯನ್ನು ಪರಿಶೀಲಿಸುವರು. |

| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯದ ವಿವರ | ಬೋಧನೋಪಕರಣ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯದ ವಿವರ | ಬೋಧನೋಪಕರಣ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 40 ನಿಮಿಷ | ಜೀವನ ಶಿಕ್ಷಣ (ಯೋಗ) | ಶಾರೀರಿಕ ಶಿಕ್ಷಣ ಹಾಗೂ ಯೋಗಾಸಕ್ತಿ ಬೆಳೆಸುವರು. | ಜಮಖಾನೆ (ಯೋಗಾಸನಗಳ ಚಾರ್ಟ್) | ಶಿಕ್ಷಕ | ಶಿಕ್ಷಕರು ಯೋಗ ಶಿಕ್ಷಣದ ಬಗ್ಗೆ ಕೆಲವಾರು ಸಾಮಾನ್ಯ ಅಂಶಗಳನ್ನು ತಿಳಿಸುವರು. ಇದರಿಂದ ಆರೋಗ್ಯ ಕಾಪಾಡುವುದರ ಬಗ್ಗೆ ಅರಿವು ಮೂಡಿಸುವರು. ಹಿಂದಿನ ಯೋಗಾವಧಿಯಲ್ಲಿ ಕಲಿಸಿದ್ದ ವಜ್ರಾಸನವನ್ನು ಈ ಅವಧಿಯಲ್ಲಿ ಪುನರಾವರ್ತನೆ ಮಾಡಿಸುವರು. | ಜೀವನ ಶಿಕ್ಷಣ (ಯೋಗ ಶಿಕ್ಷಣ) | ಶಾರೀರಿಕ ಶಿಕ್ಷಣ ಹಾಗೂ ಯೋಗಾಸಕ್ತಿ ಶಿಕ್ಷಣ ಬೆಳೆಸುವರು. | ಜಮಖಾನೆ (ಯೋಗಾಸನಗಳ ಚಾರ್ಟ್) | ಶಿಕ್ಷಕ | ಶಿಕ್ಷಕರು ಯೋಗ ಶಿಕ್ಷಣದ ಬಗ್ಗೆ ಕೆಲವಾರು ಸಾಮರ್ಥ್ಯ ಅಂಶಗಳನ್ನು ತಿಳಿಸುವರು. ಇದರಿಂದ ಆರೋಗ್ಯ ಕಾಪಾಡುವುದರ ಬಗ್ಗೆ ಅರಿವು ಮೂಡಿಸುವರು. ಹಿಂದಿನ ಯೋಗಾವಧಿಯಲ್ಲಿ ಕಲಿಸಿದ್ದ ವಜ್ರಾಸನವನ್ನು ಈ ಅವಧಿಯಲ್ಲಿ ಪುನರಾವರ್ತನೆ ಮಾಡಿಸುವರು. |
| | 40 ನಿ | ಚಿನ್ನರ ಚುಕ್ಕಿ | | ರೇಡಿಯೋ, ಚುಕ್ಕಿ ಜಿಂಗಲ್ ನೋಟ್‌ಬುಕ್ | ಶಿಕ್ಷಕ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ. | ಚಿನ್ನರ ಚುಕ್ಕಿ | | ರೇಡಿಯೋ, ಚುಕ್ಕಿ ಜಿಂಗಲ್ ನೋಟ್‌ಬುಕ್ | ಶಿಕ್ಷಕ | 2ನೇ ತರಗತಿ ಮಕ್ಕಳ ಜೊತೆ 3ನೇ ತರಗತಿ ಮಕ್ಕಳು ರೇಡಿಯೋ ಕಾರ್ಯ ಕ್ರಮದಲ್ಲಿ ಭಾಗವಹಿಸುವರು. |
| 4ನೇ | 10 ನಿ | ಪರಿಸರ ಅಧ್ಯಯನ ನಮ್ಮ ಸುತ್ತಮುತ್ತ | ಮನುಷ್ಯ ಮತ್ತು ಪರಿಸರದ ಪರಸ್ಪರ ಸಂಬಂಧಗಳನ್ನು ಅರಿಯುವರು. ಸ್ವಚ್ಛ ಪರಿಸರಗಳ ಬಗ್ಗೆ ಮಾಹಿತಿ ಪಡೆಯುವರು. | ಚಿತ್ರ ಪಟ | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಡಿಂಗು ಟಕ್ಕ, ಡಿಂಗು ಟಕ್ಕ, ಡಿಂಗು ಟಕ್ಕ ಡಿಂಗ್ ನಾನು ನೋಡುವೆ ಕಣ್ಣುಗಳಿಂದಲೇ, ನಾನು ಕೇಳುವೆ ಕಿವಿಗಳಿಂದಲೇ, (ಆಡೋಣ ಬಾ ಕೈಪಿಡಿಯ ಸಾಹಿತ್ಯ) ಅಭಿನಯ ಗೀತೆಯನ್ನು ಹಾಡಿಸುವರು. | ಪರಿಸರ ಅಧ್ಯಯನ ನಮ್ಮ ಜ್ಞಾನೇಂದ್ರಿಯಗಳು | ದೇಹದ ಭಾಗಗಳಾದ ಜ್ಞಾನೇಂದ್ರಿಯಗಳನ್ನು ಗುರುತಿಸಲು ಮತ್ತು ಅವುಗಳ ಕಾರ್ಯಗಳನ್ನು ತಿಳಿಯುವರು. ಜ್ಞಾನೇಂದ್ರಿಯಗಳ ಸ್ವಚ್ಛತೆ ಮತ್ತು ರಕ್ಷಣೆಯ ವಿಧಾನ ಅರಿಯುವರು. | ಆಟದ ಬಯಲಿನಲ್ಲಿ ಆಟ ಆಡಿಸು ವುದು. ಪಠ್ಯಪುಸ್ತಕ | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಎರಡನೇ ತರಗತಿಯ ಮಕ್ಕಳ ಜೊತೆಯಲ್ಲಿ ಮೂರನೇ ತರಗತಿಯ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸುವರು. |
| | 5 ನಿ | | | | ಶಿಕ್ಷಕ | ಮುಂದಿನ ಪಾಠಕ್ಕೆ ಸಿದ್ಧತೆ ಮಾಡಿಕೊಳ್ಳುವರು. | | | | ಶಿಕ್ಷಕ | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಕೆಲವು ಪರಿಸರಕ್ಕೆ ಸಂಬಂಧಿಸಿದ ಚಿತ್ರಪಟ ಗಳನ್ನು ಅಂಟಿಸಿ ಅವುಗಳನ್ನು ಹೆಸರಿಸಲು ತಿಳಿಸುವರು. | | | | ವಿದ್ಯಾರ್ಥಿ | ಮಕ್ಕಳನ್ನು ಹಿರೇಮಣಿಯ ಸಹಾಯದಿಂದ ಸ್ವಚ್ಛತಾ ರೈಲು ಆಟವನ್ನು ಆಡಿಸಲು ತಿಳಿಸುವರು. |
| | 10 ನಿ | | | | ಶಿಕ್ಷಕ | ಮುಂದಿನ ಚಟುವಟಿಕೆಗಳಿಗೆ ಸೂಚನೆ ನೀಡುವರು. | | | | ಶಿಕ್ಷಕ | ಮುಂದಿನ ಪಾಠಕ್ಕೆ ಸಿದ್ಧತೆ ಮಾಡಿಕೊಳ್ಳುವರು. |
| | 25 ನಿ | | | | ವಿದ್ಯಾರ್ಥಿ | ಮಕ್ಕಳಿಗೆ ದೋಣಿ ಚಿತ್ರ ಬರೆದು ಬಣ್ಣ ಹಚ್ಚಲು ಹೇಳುವರು. | | | | ಶಿಕ್ಷಕ | ಪುಟ ಸಂಖ್ಯೆ 37 ರಲ್ಲಿರುವ ತಿಳಿ ಕಲಿ ವಿಭಾಗದಲ್ಲಿನ ಪ್ರಶ್ನೆಗಳಿಗೆ ಉತ್ತರಿಸಿ ಅಭ್ಯಾಸ ಮಾಡಿಸುವರು. |
| | 5 ನಿ | | | | ಶಿಕ್ಷಕ | ಬರೆದ ಚಿತ್ರವನ್ನು ಪರಿಶೀಲಿಸಿ ಮಾರ್ಗದರ್ಶನ ನೀಡುವರು. | | | | ಶಿಕ್ಷಕ | ಪುಟ 39 ರಲ್ಲಿರುವ ಹೀಗೆ ಮಾಡಬಾರದು ಏಕೆ? ಪ್ರಶ್ನೆಗಳಿಗೆ ಉತ್ತರಿಸಲು ತಿಳಿಸುವರು. |

**39ನೇ ದಿನ**



| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿನ್ಯಾಸ | ಕಲಿಕಾ ಪ್ರಕ್ರಿಯೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿನ್ಯಾಸ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ<br>ಉತ್ತಿಯ ಮುತ್ತಿನ ಜೋಡಿ | * ಸಂಯುಕ್ತಾಕ್ಷರಗಳು, ಪದಗಳು ಮತ್ತು ವಾಕ್ಯಗಳನ್ನು ನಕಲು ಮಾಡುವರು.<br>* ಭಾಷೆಯಲ್ಲಿ ಸ್ವರಗಳನ್ನು ಉಚ್ಚರಿಸುವರು. | ಅಭಿನಯ ಗೀತೆ ಚಾರ್ಟ್ (ಫ್ಲಾಶ್‌ಕಾರ್ಡ್), ತಲೆಕಟ್ಟಿರುವ ಒತ್ತಕ್ಷರಗಳು | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ : ಅಭಿನಯಗೀತೆ :</u>** ನಮ್ಮ ಮಾವ ಬಲು ಜೋರು ಕೊಡುವನು ಒಂದು ಸೈಕಲ್ಲು, ಸೈಕಲ್ ಸವಾರಿ ಮಾಡೋಣ, ಮಾವನ ಮನೆಗೆ ಹೋಗೋಣ. ಚುಕ್ ಬುಕ್ ರೈಲು ಬಂತು. ಈ ಅಭಿನಯ ಗೀತೆ ಹಾಡಿಸುವರು. | ಕನ್ನಡ<br>ಗಗನ ಗುಡಿ | * ಬೇರೆ ಮಕ್ಕಳ ಬರವಣಿಗೆಯನ್ನು ಓದುವರು.<br>* ಎಂದು ನಡೆ, ಪದ್ಯವನ್ನು ಓದಿದ ಮೇಲೆ ಯಾರು ? ಯಾವಾಗ? ಎಲ್ಲಿ? ಮತ್ತು ಏನು? ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥರಾಗುವರು. | ಪದ್ಯ ಚಾರ್ಟ್ | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** 2ನೇ ತರಗತಿಯ ಮಕ್ಕಳೊಂದಿಗೆ 3ನೇ ತರಗತಿಯ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸುವರು. |
| | 5 ನಿ | | | | | ಮಕ್ಕಳನ್ನು ಮುಂದಿನ ಚಟುವಟಿಕೆಗೆ ಅಣಿಗೊಳಿಸುವರು. | | | | | ಗಗನ ಗುಡಿ ಪದ್ಯವನ್ನು ಓದಿ ನಂತರ ಬರೆಯಲು ತಿಳಿಸುವರು. |
| | 25 ನಿ | | | | ಶಿಕ್ಷಕ | ತಲೆಗಟ್ಟಿರುವ ಒತ್ತಕ್ಷರಗಳನ್ನು ಪರಿಚಯಿಸಿ ನಂತರ ಮಕ್ಕಳಿಂದ ಪದಗಳನ್ನು ಹೇಳಿಸುವರು. | | | | ಹಿರೇಮಣಿ | ಹಿರೇಮಣಿ ಸಹಾಯದಿಂದ ಮೇಲಿನ ಚಟುವಟಿಕೆ ಮಾಡಿಸುವರು. |
| | 10 ನಿ | | | | | ಪಠ್ಯಪುಸ್ತಕದಲ್ಲಿನ ಪುಟಸಂಖ್ಯೆ 19ರ ಅಭ್ಯಾಸ ಚಟುವಟಿಕೆಯ ಮೊದಲನೇ ಪುಟವನ್ನು ಸ್ಫುಟವಾಗಿ ನಕಲು ಮಾಡಲು ತಿಳಿಸುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| | 25 ನಿ | | | | ಹಿರೇಮಣಿ | **<u>ಪುನರ್ಬಲನ ಚಟುವಟಿಕೆ :</u>** ಹಿರೇಮಣಿ ಸಹಾಯದಿಂದ ಮೇಲಿನ ಚಟುವಟಿಕೆಯನ್ನು ಮಾಡುವರು. | | | | ಶಿಕ್ಷಕ | **<u>ಕಲಿಕಾಂಶ ಚಟುವಟಿಕೆ :</u>** ಗಗನ ಗುಡಿ ಪದ್ಯವನ್ನು ರಾಗಬದ್ಧವಾಗಿ, ಹಾವಭಾವದೊಂದಿಗೆ ಹಾಡಿ, ಮಕ್ಕಳಿಂದ ಸಾಮೂಹಿಕವಾಗಿ ಹಾಡಿಸುವರು. |
| | 5 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಪದ್ಯವನ್ನು ಸಾಮೂಹಿಕವಾಗಿ ಹಾಡಿಸುವರು. |
| 2ನೇ | 10 ನಿ | ಗಣಿತ<br>ಸಂಖ್ಯೆಗಳು | ಕ್ರಮಾಗತ ಸಂಖ್ಯೆಗಳು ಮತ್ತು ಕ್ರಮ ಸೂಚಕಗಳನ್ನು ಗುರುತಿಸುವರು. | ಮಕ್ಕಳು ವಿವಿಧ ರೀತಿಯ ವಸ್ತುಗಳು ಬಳಪ, ಪೆನ್ಸಿಲ್, ಚೆಂಡು, ಹೂ ಕ್ಯಾಲೆಂಡರ್, ನಾಣ್ಯ, ನೋಟುಗಳು, ಚಿತ್ರಪಟ, ಕಲ್ಲು, ಬೆಲೂನು ಹಾಗು ತರಗತಿ ಸನ್ನಿವೇಶ | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** (ಹಿಂದಿನ ಅವಧಿಯ ಪೂ.ಸಿ.ಚ. ಹಾಡಿನ ಮುಂದಿವರಿದ ಭಾಗ) ಐದು ಒಂದು ಆರು ನಮಗಿರೋ ಪುಸ್ತಕಗಳಾರು<br>ಆರು ಒಂದು ಏಳು ವಾರದಲ್ಲಿ ದಿನಗಳು ಏಳು<br>ಏಳು ಒಂದು ಎಂಟು ಶಾಲೆಗೂ ನಮಗೂ ನಂಟು<br>ಎಂಟು ಒಂದು ಒಂಭತ್ತು ಬಹುಮಾನ ನನಗೆ ಬಂತು<br>ಒಂಭತ್ತು ಒಂದು ಹತ್ತು ನಾನಾದೆ ಜಾಣ ಇವತ್ತು. ಈ ಅಭಿನಯ ಗೀತೆ ಕೇಳಿಕೊಡುವರು. | ಗಣಿತ<br>ಸಂಕಲನ | * ಮೊತ್ತವು 999ಕ್ಕೆ ಮೀರದಂತೆ ಹಾಗು ದಶಕವಿರುವ ಮೂರು ಅಂಕಿಗಳನ್ನು ಎರಡು ಅಥವಾ ಮೂರು ಸಂಖ್ಯೆಗಳ ಸಂಕಲನ ಮಾಡುವರು.<br>* ನಿತ್ಯ ಜೀವನದ ಸರಳ ಸಂಕಲನದ ಸಮಸ್ಯೆಗಳನ್ನು ಬಿಡಿಸುವರು. | ಕಡ್ಡಿಗಳು, ಗೋಲಿಗಳು, ಕಪ್ಪುಹಲಗೆ, ಸಂಖ್ಯಾಫಲಕ | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಮೂರನೇ ತರಗತಿಯ ಮಕ್ಕಳನ್ನು ಎರಡನೇ ತರಗತಿ ಮಕ್ಕಳ ಜೊತೆಯಲ್ಲಿ ಸೇರಿಸಿಕೊಂಡು ಪೂರ್ವ ಸಿದ್ಧತಾ ಚಟುವಟಿಕೆ ಮಾಡಿಸುವರು. |
| | 5 ನಿ | | | | | ಹಿಂದಿನ ಅವಧಿಯ ಚಟುವಟಿಕೆಯನ್ನು ಮುಂದುವರಿಸಿಕೊಂಡು ಹೋಗಲು ಸೂಚನೆ ನೀಡುವರು. | | | | | ಮಕ್ಕಳು ಮುಂದಿನ ಚಟುವಟಿಕೆಗೆ ಅಣಿಯಾಗುವರು. |
| | 25 ನಿ | | | | ಹಿರೇಮಣಿ | ಶಿಕ್ಷಕರ ಸೂಚನೆಯಂತೆ ಕ್ಯಾಲೆಂಡರ್ ಬಳಸಿ ದಿನಗಳನ್ನು ಕ್ರಮಾಗತವಾಗಿ ಜೋಡಿಸುವ ಚಟುವಟಿಕೆ ಮಾಡುವರು. | | | | ಶಿಕ್ಷಕ | **<u>ಕಲಿಕಾಂಶ ಚಟುವಟಿಕೆ :</u>** ಪಠ್ಯಪುಸ್ತಕದ ಪುಟಸಂಖ್ಯೆ 54 ಹಾಗು 55 ರಲ್ಲಿರುವ ವಿಸ್ತರಣಾ ಕ್ರಮದಲ್ಲಿ ದಶಕವಿರುವ ಸಂಕಲನ ಲೆಕ್ಕಗಳನ್ನು ಕಡ್ಡಿ ಬಳಸಿ ಕಟ್ಟುಗಳನ್ನಾಗಿ ಮಾಡಿ ಸಂಕಲನ ಮಾಡಿ ತೋರಿಸುವರು. |
| | 10 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಪು.ಸಂ. 51ರಲ್ಲಿನ ಚಟುವಟಿಕೆಯನ್ನು ಹಿರೇಮಣಿ ಸಹಾಯದಿಂದ ಮುಂದುವರಿಸಲು ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | **<u>ಕಲಿಕಾಂಶ ಚಟುವಟಿಕೆ :</u>** ಪಠ್ಯಪುಸ್ತಕದ ಪುಟಸಂಖ್ಯೆ 54ರಲ್ಲಿರುವ ಚಟುವಟಿಕೆಯನ್ನು ನಾಣ್ಯ ಮತ್ತು ನೋಟು ಬಳಸಿ ಚಟುವಟಿಕೆಯನ್ನು ಮಾಡಿಸುವರು. | | | | ಹಿರೇಮಣಿ | ಹಿಂದಿನ ಅವಧಿಯ ಚಟುವಟಿಕೆಯನ್ನು ಹಿರೇಮಣಿಯು ಮುಂದುವರಿಸುವರು. |
| | 5 ನಿ | | | | | | | | | | ಮಕ್ಕಳು ಮಾಡಿದ ಚಟುವಟಿಕೆಯನ್ನು ಪರಿಶೀಲಿಸುವರು. |

| ಅವಧಿ | ಸಮಯ ನಿಮಿಷ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯ ವಿವರ | ಉಪಯೋಗಿಸುವ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯ ವಿವರ | ಉಪಯೋಗಿಸುವ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 40 ನಿ | ಸಾ.ಉ. ಉ.ಕಾ. | ಜೇಡಿಮಣ್ಣಿನಿಂದ ಆಟದ ವಸ್ತು ಮತ್ತು ಅಲಂಕಾರಿಕ ವಸ್ತುಗಳನ್ನು ತಯಾರಿಸುವರು. | ಜೇಡಿ ಮಣ್ಣು, ನೀರು | ಶಿಕ್ಷಕ | **ಜೇಡಿಮಣ್ಣಿನಿಂದ ವಿವಿಧ ಮಾದರಿಗಳನ್ನು ತಯಾರಿಸುವುದು :**<br><br>ಹಿಂದಿನ ತರಗತಿಯಲ್ಲಿ ಮಾಡಿಸಿರುವ ಚಟುವಟಿಕೆಯಂತೆಯೆ ಪ್ರಾಣಿಗಳು ಹಾಗೂ ಆಟದ ಸಾಮಾನುಗಳನ್ನು ತಯಾರಿಸುವ ಚಟುವಟಿಕೆಯಲ್ಲಿ ತೊಡಗಿಸುವರು.<br>ಶಿಕ್ಷಕರು ಮಾರ್ಗದರ್ಶನ ನೀಡುವರು. | ಸಾ. ಉ. ಉ. ಕಾ | ಜೇಡಿಮಣ್ಣಿನಿಂದ ಆಟದ ಸಾಮಾನುಗಳನ್ನು ಮತ್ತು ಅಲಂಕಾರಿಕ ವಸ್ತುಗಳನ್ನು ತಯಾರಿಸುವರು. | ಜೇಡಿಮಣ್ಣು, ನೀರು | ಶಿಕ್ಷಕ | 2ನೇ ತರಗತಿ ಮಕ್ಕಳ ಜೊತೆ 3ನೇ ತರಗತಿಯ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸುವರು. |
| | 40 ನಿ | ಚಿನ್ನರ ಚುಕ್ಕಿ | | ರೇಡಿಯೋ ಕಾರ್ಯಕ್ರಮ ಆಲಿಸುವುದು | ಶಿಕ್ಷಕ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ | ಚಿನ್ನರ ಚುಕ್ಕಿ | | ರೇಡಿಯೋ, ಕಾರ್ಯಕ್ರಮ ಆಲಿಸುವುದು | ಶಿಕ್ಷಕ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ |
| 4ನೇ | 10 ನಿ | ಪರಿಸರ ಅಧ್ಯಯನ ನಮ್ಮ ಸುತ್ತ ಮುತ್ತ | ಮನುಷ್ಯ ಮತ್ತು ಪರಿಸರದ ಪರಸ್ಪರ ಸಂಬಂಧಗಳನ್ನು ಅರಿಯುವರು. ಸ್ಥಳೀಯ ಪರಿಸರಗಳ ಬಗ್ಗೆ ಮಾಹಿತಿ ಪಡೆಯುವರು. | (ಪ್ರಶ್ನೆ ಕಾರ್ಡುಗಳು), ಪ್ರಶ್ನೆ ಕಾರ್ಡ್ | ತಂಡ | **ಪೂರ್ವ ಸಿದ್ಧತಾ ಚಟುವಟಿಕೆ :**<br>ಡಿಂಗು ಟಕ್ಕ ಡಿಂಗು ಟಕ್ಕ ಡಿಂಗು ಟಕ್ಕ ಡಿಂಗ್ ನಾನು ನೋಡುವೆ ಕಣ್ಣಳಿಂದಲೇ, ನಾನು ನೋಡುವೆ ಕಿವಿಗಳಿಂದಲೇ (ಆಡೋಣ ಬಾ ಕೈಪಿಡಿಯ ಸಾಹಿತ್ಯ) | ಪರಿಸರ ಅಧ್ಯಯನ ನಮ್ಮ ಜ್ಞಾನೇಂದ್ರಿಯಗಳು | ದೇಹದ ಭಾಗಗಳಿಂದ ಜ್ಞಾನೇಂದ್ರಿಯಗಳನ್ನು ಗುರ್ತಿಸಲು ಮತ್ತು ಅವುಗಳ ಕಾರ್ಯಗಳನ್ನು ತಿಳಿಯುವರು. ಜ್ಞಾನೇಂದ್ರಿಯಗಳ ಸ್ವಚ್ಛತೆ ಮತ್ತು ರಕ್ಷಣೆಯ ವಿಧಾನ ಅರಿಯುವರು. | ಚಿತ್ರಪಟ | ಶಿಕ್ಷಕ | ಡಿಂಗು ಟಕ್ಕ ಡಿಂಗು ಟಕ್ಕ ……….. ಅಭಿನಯ ಗೀತೆಯನ್ನು ಹಾಡಿಸುವರು. |
| | 5 ನಿ | | | | | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. | | | | | ಮಕ್ಕಳು ಮುಂದಿನ ಪಾಠಕ್ಕೆ ಸಿದ್ಧತೆ ಮಾಡಿಕೊಳ್ಳುವರು. |
| | 25 ನಿ | | | | ಗುಂಪು | ಮಕ್ಕಳಿಗೆ ಪ್ರಶ್ನೆಗೆ ಉತ್ತರಿಸಲು ಗುಂಪು ಚಟುವಟಿಕೆ ಮಾಡಿಸುವರು.<br>ಉದಾ. ಕಾಡಿನಲ್ಲಿ ವಾಸಿಸುವ ಪ್ರಾಣಿಗಳಾವುವು? | | | | ತಂಡ | **ಪುನರ್ಬಲನ ಚಟುವಟಿಕೆ :** ಪು. ಸಂ. 38ರಲ್ಲಿರುವ ಬಿಟ್ಟ ಸ್ಥಳವನ್ನು ಸೂಕ್ತ ಪದದಿಂದ ತುಂಬುವುದು ಹಾಗೂ ಹೀಗೆ ಮಾಡುವುದರಿಂದ ಏನು ಅನುಕೂಲ. ಈ ಪ್ರಶ್ನೆಗಳಿಗೆ ಉತ್ತರಿಸಲು ಹೇಳುವರು. |
| | 10 ನಿ | | | | | ಮಕ್ಕಳು ಮುಂದಿನ ಪಾಠಕ್ಕೆ ಸಿದ್ಧತೆ ಮಾಡಿಕೊಳ್ಳುವರು. | | | | | ಮುಂದಿನ ಚಟುವಟಿಕೆಗಳಿಗೆ ಸೂಚನೆ ನೀಡುವರು. |
| | 25 ನಿ | | | | ತಂಡ | **ಪೂರ್ವ ಸಿದ್ಧತಾ ಚಟುವಟಿಕೆ :** ಪ್ರಶ್ನೆ ಕಾರ್ಡುಗಳನ್ನು ತಯಾರಿಸಿಕೊಂಡು ಮಕ್ಕಳಿಗೆ ಗುಂಪು ಚಟುವಟಿಕೆಗಳನ್ನು ಮಾಡಿಸಿ ಉತ್ತರ ಪಡೆಯುವರು. | | | | ಗುಂಪು | ಜ್ಞಾನೇಂದ್ರಿಯಗಳ ಚಿತ್ರಗಳನ್ನು ಬರೆದು ಹೆಸರಿಸುವರು. |
| | 5 ನಿ | | | | | ಗುಂಪು ಚಟುವಟಿಕೆಯನ್ನು ಪರಿಶೀಲಿಸುವರು. | | | | | ಮಕ್ಕಳು ಬಿಡಿಸಿದ ಚಿತ್ರಗಳನ್ನು ಗಮನಿಸಿ ಮಕ್ಕಳನ್ನು ಪ್ರಶಂಸಿಸುವರು. |

| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕೆಯ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕೆಯ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ<br>ಲಚ್ಚಿಯ ಮೆಚ್ಚಿನ ದೋಣಿ | * ಸಂಯುಕ್ತಾಕ್ಷರಗಳು, ಪದಗಳು ಮತ್ತು ವಾಕ್ಯಗಳನ್ನು ನಕಲು ಮಾಡುವುದು<br>* ಭಾಷೆಯಲ್ಲಿನ ಎಲ್ಲಾ ಸ್ವರಗಳನ್ನು ಉಚ್ಚರಿಸುವುದು. | ಅಭಿನಯ ಗೀತೆ ಚಾರ್ಟು,<br>ಮೂಲಾಕ್ಷರಗಳನ್ನು ಹೋಲುವ ಒತ್ತಕ್ಷರಗಳ ಚಾರ್ಟು, ಪಠ್ಯಪುಸ್ತಕ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** 'ಅಭಿನಯ ಗೀತೆ' "ದೋಣಿ" ದೋಣಿ ದೋಣಿ<br>ದೋಣಿ ನೀರ ಮೇಲೆ ದೋಣಿ<br>ಅಲ್ಲಿ ಒಂದು ದೋಣಿ<br>ಇಲ್ಲಿ ಒಂದು ದೋಣಿ, ಬಂತು ಎರಡು ದೋಣಿ ॥<br>ಹಿಂದೆ ಒಂದು ದೋಣಿ, ಮುಂದೆ ಒಂದು ದೋಣಿ<br>ದೋಣಿ ದೋಣಿ ದೋಣಿ ॥ | ಕನ್ನಡ<br>ಗಗನ ಗುಡಿ | * ಬೇರೆ ಮಕ್ಕಳ ಬರವಣಿಗೆಯನ್ನು ಓದುವುದು.<br>* ಒಂದು ಸರಳ ಪದ್ಯವನ್ನು ಓದಿದ ಮೇಲೆ ಯಾರು ಯಾವಾಗ ಏನು ಮತ್ತು ಎಲ್ಲಿ ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥವಾಗುವುದು. | ಪಠ್ಯಪುಸ್ತಕ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** ಅಭಿನಯ ಗೀತೆ, "ದೋಣಿ"<br><br>2ನೇ ತರಗತಿಯ ಮಕ್ಕಳೊಂದಿಗೆ ಅಭಿನಯ ಗೀತೆ ಚಟುವಟಿಕೆಯಲ್ಲಿ ತೊಡಗಿಸುವರು. |
| | 5 ನಿ | | | | | ಮುಂದಿನ ಚಟುವಟಿಕೆಗೆ ಅಣಿಯಾಗುವರು. | | | | ಶಿಕ್ಷಕ | **ಪುನರ್ಬಲನ ಚಟುವಟಿಕೆ :** ಓದಿ ತಿಳಿ, ಗಮನಿಸಿ ತಿಳಿ ಚಟುವಟಿಕೆಯನ್ನು ಮಾಡಿಸಲು ಸೂಚಿಸುವರು. |
| | 25 ನಿ | | | | ಶಿಕ್ಷಕ | ಮೂಲಾಕ್ಷರಗಳನ್ನು ಹೋಲುವ ಒತ್ತಕ್ಷರಗಳ ಮತ್ತು ಅವುಗಳ ಪದಗಳ ಪರಿಚಯ ಮಾಡಿಸಿ, ಮಕ್ಕಳಿಂದ ಪದಗಳನ್ನು ಹೇಳಿಸಿ ಬರೆಯಿಸುವರು. | | | | ಹಿರೇಮಣಿ | ಹಿರೇಮಣಿ ಸಹಾಯದಿಂದ ಮೇಲಿನ ಚಟುವಟಿಕೆಯನ್ನು ಮಾಡಿಸುವರು. |
| | 5 ನಿ | | | | | ಲಚ್ಚಿಯ ಮೆಚ್ಚಿನ ದೋಣಿ ಪಾಠದ ಅಭ್ಯಾಸ ಚಟುವಟಿಕೆಯ 2 ಮತ್ತು 3ನೇ ಪುಟವನ್ನು ನಕಲು ಮಾಡಲು ತಿಳಿಸುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| | 25 ನಿ | | | | ಹಿರೇ ಮಣಿ | ಹಿರೇಮಣಿ ಸಹಾಯದಿಂದ ಮೇಲಿನ ಚಟುವಟಿಕೆಯನ್ನು ಮಾಡುವರು. | | | | ಶಿಕ್ಷಕ | **ಬಳಿಕೆ ಹಂತ :** ಗಗನ ಗುಡಿ ಪದ್ಯವನ್ನು ಸಾಮೂಹಿಕ, ವೈಯಕ್ತಿಕವಾಗಿ ಹೇಳಿಸಿ, ಹೊಸಪದಗಳ ಪರಿಚಯ ಮಾಡಿಸುವರು. |
| | 10 ನಿ | | | | | ಶಿಕ್ಷಕರು ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಹೊಸಪದಗಳನ್ನು ಬರೆಸುವರು. |
| 2ನೇ | 10 ನಿ | ಗಣಿತ<br>ಸಂಖ್ಯೆಗಳು | ಕ್ರಮಾಗತ ಸಂಖ್ಯೆಗಳು ಮತ್ತು ಕ್ರಮ ಸೂಚಕಗಳನ್ನು ಗುರುತಿಸುವುದು. | ಮಕ್ಕಳು, ಬಳಪ, ಪೆನ್ಸಿಲ್, ಚಮಚ, ಹೂ, ಕ್ಯಾಲೆಂಡರ್, ನಾಣ್ಯ, ನೋಟುಗಳು, ಚಿತ್ರಪಟ, ಕಲ್ಲು, ಬೆಲೂನು ಹಾಗು ತರಗತಿ ಸನ್ನಿವೇಶ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** ಒಂದು ಒಂದು ಎರಡು ಒಳ್ಳೆಯ ಸುದ್ದಿ ಹರಡು<br>ಎರಡು ಒಂದು ಮೂರು ಊಟಕ್ಕೆ ಬೇಕು ಸಾರು<br>ಮೂರು ಒಂದು ನಾಲ್ಕು ಬಾಗಿಲು ಮುಂದಕೆ ಹಾಕು<br>ನಾಲ್ಕು ಒಂದು ಐದು ಮಾಡುವೆ ನಾನು ಊದು<br>ಐದು ಒಂದು ಆರು ಮರಕ್ಕೆ ಉಂಟು ಬೇರು<br>ಆರು ಒಂದು ಏಳು ತಿಂದಿತು ಹಕ್ಕಿ ಕಾಳು<br>ಏಳು ಒಂದು ಎಂಟು ಪಲ್ಯಕೆ ಬೇಕು ದಂಟು<br>ಎಂಟು ಒಂದು ಒಂಬತ್ತು ಗಾಡಿಗೆ ಹೂಡು ಜೋಡೆತ್ತು<br>ಒಂಬತ್ತು ಒಂದು ಹತ್ತು ಹೊಲದಲಿ ಬೀಜವ ಬಿತ್ತು.<br>ಈ ಅಭಿನಯ ಗೀತೆ ಹೇಳಿಕೊಡುವರು. | ಗಣಿತ<br>ಸಂಕಲನ | * ಮೊತ್ತವು 999ಕ್ಕೆ ಮೀರದಂತೆ ದಶಕವಿಲ್ಲದೆ ಹಾಗು ದಶಕವಿರುವ ಹಾಗೆ ಮೂರು ಅರಿಕೆಗಳುಳ್ಳ ಎರಡು ಅಥವಾ ಮೂರು ಸಂಖ್ಯೆಗಳ ಸಂಕಲನ ಮಾಡುವುದು.<br>* ನಿತ್ಯ ಜೀವನದ ಸರಳ ಸಂಕಲನದ ಸಮಸ್ಯೆಗಳನ್ನು ಬಿಡಿಸುವುದು. | ಕಡ್ಡಿಗಳು, ಗೋಲಿಗಳು, ಕಪ್ಪು ಹಲಗೆ, ಸಂಖ್ಯಾ ಫಲಕಗಳು | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** ಎರಡನೆಯ ತರಗತಿ ಮಕ್ಕಳ ಜೊತೆಯಲ್ಲಿಯೇ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 5 ನಿ | | | | | ಮಕ್ಕಳು ಮುಂದಿನ ಚಟುವಟಿಕೆಗೆ ಅಣಿಯಾಗುವರು. | | | | ಶಿಕ್ಷಕ | ಸಂಕಲನ ಲೆಕ್ಕ ಮಾಡುವ ಚಟುವಟಿಕೆಯ ಬಗ್ಗೆ ಮಕ್ಕಳಿಗೆ ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | **ಪುನರ್ಬಲನ ಚಟುವಟಿಕೆ :** ಆಟದ ಮೈದಾನಕ್ಕೆ ಮಕ್ಕಳನ್ನು ಕರೆದುಕೊಂಡು ಹೋಗಿ ಮಕ್ಕಳನ್ನು ಸಾಲಾಗಿ ನಿಲ್ಲಿಸಿ ಮಗುವಿನ ಹೆಸರನ್ನು ಹೇಳಿ ಆ ಮಗು ಎಷ್ಟನೆಯವನು ಎಂದು ಕೇಳುವರು. ಇದೇ ರೀತಿ ಚಟುವಟಿಕೆಯನ್ನು ಮುಂದುವರಿಸುವರು. | | | | ಸ್ವಯಂ ಕಲಿಕೆ | ಸಂಖ್ಯೆಗಳನ್ನು ವಿಸ್ತರಿಸಿ ಬರೆದು ಸಂಕಲನ ಮಾಡುವ ಲೆಕ್ಕಗಳನ್ನು ಮಕ್ಕಳು ಮಾಡುವರು. |
| | 40 ನಿ | ಜೀವನ ವಿಜ್ಞಾನ | ಕಥೆಯ ನೀತಿ ಅರಿಯುವರು. | ನೀತಿ ಕಥೆಗಳ ಚಿತ್ರಪಟ | ಶಿಕ್ಷಕ | ನೀತಿ ಕಥೆ ಚಿತ್ರಪಟಗಳಿಂದ ಹೊಸ ಕಥೆಗಳನ್ನು ಎರಡೂ ತರಗತಿಗೂ ಹೇಳುವರು.<br>ಮಕ್ಕಳಿಂದ ಕಥೆಯನ್ನು ಹೇಳಿಸುವರು. | | ಜೀವನ ವಿಜ್ಞಾನ | | ಶಿಕ್ಷಕ | 2ನೇ ತರಗತಿ ಮಕ್ಕಳೊಂದಿಗೆ ಕಥೆ ಆಲಿಸುವರು.<br>ಮಕ್ಕಳಿಂದ ಕಥೆಯನ್ನು ಹೇಳಿಸುವರು. |

| ವಿಷಯ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯದ ವಿವರ | ಬಳಸುವಂತಹ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯದ ವಿವರ | ಬಳಸುವಂತಹ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 40 ನಿ | ಜೀವನ ವಿಜ್ಞಾನ | ಮಕ್ಕಳಲ್ಲಿ ಸಮಯ ಪ್ರಜ್ಞೆ ಬೆಳೆಸುವುದು. | ದಿನಚರಿ ಬರೆಯುವುದು. | ಗಡಿಯಾರ | **ಚಟುವಟಿಕೆ**<br>ಹಿಂದಿನ ತರಗತಿಯಲ್ಲಿ ದಿನಚರಿಯಲ್ಲಿನ ಚಟುವಟಿಕೆಗಳ ಬಗ್ಗೆ ಪರಿಚಯಿಸಲಾಗಿದೆ. ಈ ತರಗತಿಯಲ್ಲಿ ಮಕ್ಕಳಿಂದಲೇ ಮೌಖಿಕವಾಗಿ ದಿನಚರಿಯನ್ನು ಕೇಳಿ ಪಡೆದು, ಕಪ್ಪುಹಲಗೆಯ ಮೇಲೆ ದಾಖಲಿಸುವರು. | ಜೀವನ ವಿಜ್ಞಾನ | ಮಕ್ಕಳಲ್ಲಿ ಸಮಯ ಪ್ರಜ್ಞೆ ಬೆಳೆಸುವುದು. | ಕಪ್ಪುಹಲಗೆ, ಸೀಮೆಸುಣ್ಣ, ಗಡಿಯಾರ | ಶಿಕ್ಷಕ | 2ನೇ ತರಗತಿಯ ಮಕ್ಕಳ ಜೊತೆ 3ನೇ ತರಗತಿ ಮಕ್ಕಳನ್ನು ದಿನಚರಿ ಚಟುವಟಿಕೆಯಲ್ಲಿ ತೊಡಗಿಸುವರು. |
| | 40 ನಿ | ಚಿಣ್ಣರ ಚುಕ್ಕಿ | | ಪಾಠಕ್ಕೆ ಪೂರಕ ಸಾಮಗ್ರಿಗಳು | ಶಿಕ್ಷಕ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮಕ್ಕೆ | ಚಿಣ್ಣರ ಚುಕ್ಕಿ | | | ಶಿಕ್ಷಕ | 2ನೇ ತರಗತಿಯ ಮಕ್ಕಳ ಜೊತೆ 3ನೇ ತರಗತಿ ಮಕ್ಕಳು ರೆಡಿಯೋ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳುವರು. |
| 4ನೇ | 10 ನಿ | ಪರಿಸರ ಅಧ್ಯಯನ ನಮ್ಮ ಸುತ್ತಮುತ್ತ | * ಮನುಷ್ಯ ಮತ್ತು ಪರಿಸರದ ಪರಸ್ಪರ ಸಂಬಂಧಗಳನ್ನು ಅರಿಯುವರು.<br>* ಸ್ಥಳೀಯ ಪರಿಸರಗಳ ಬಗ್ಗೆ ಮಾಹಿತಿ ಪಡೆಯುವರು. | ಪ್ರಶ್ನೆಗಳ ಕಾರ್ಡುಗಳು | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :**<br>ಡಿಂಗು ಟಕ್ಕ ಡಿಂಗು ಟಕ್ಕ...... ಡಿಂಗು ಟಕ್ಕ ಡಿಂಗ್........<br>ನಾನು ನೋಡುವೆ ಕಣ್ಣಳಿಂದಲೇ,<br>ನಾನು ಕೇಳುವೆ ಕಿವಿಗಳಿಂದಲೇ, ಅಭಿನಯ ಗೀತೆ ಹಾಡಿಸುವರು. | ಪರಿಸರ ಅಧ್ಯಯನ ನಮ್ಮ ಜ್ಞಾನೇಂದ್ರಿಯಗಳು | ದೇಹದ ಭಾಗಗಳಿಂದ ಜ್ಞಾನೇಂದ್ರಿಯಗಳನ್ನು ಗುರುತಿಸಲು ಮತ್ತು ಅವುಗಳ ಕಾರ್ಯಗಳನ್ನು ತಿಳಿಯುವರು. ಜ್ಞಾನೇಂದ್ರಿಯಗಳ ಸ್ವಚ್ಛತೆ ಮತ್ತು ರಕ್ಷಣೆಯ ವಿಧಾನ ಅರಿಯುವರು. | ಪ್ರಶ್ನಾವಳಿ ಕಾರ್ಡುಗಳು, ಜ್ಞಾನೇಂದ್ರಿಯಗಳ ಹೆಸರಿರುವ ಕಿರೀಟಗಳು | ಶಿಕ್ಷಕ | 2ನೇ ತರಗತಿಯ ಮಕ್ಕಳ ಜೊತೆಯಲ್ಲಿ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 5 ನಿ | | | | | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. | | | | | ಮಕ್ಕಳು ಮುಂದಿನ ಪಾಠಕ್ಕೆ ಸಿದ್ಧತೆ ಮಾಡಿಕೊಳ್ಳುವರು. |
| | 25 ನಿ | | | | ಸ್ವಯಂ | ವನದ ಚಿತ್ರ ಬರೆದು ಸೂಕ್ತ ಬಣ್ಣ ಹಚ್ಚಲು ತಿಳಿಸುವರು. | | | | ಶಿಕ್ಷಕ | **ಮೌಲ್ಯಮಾಪನ ಚಟುವಟಿಕೆ :** ಕೆಲವು ಪ್ರಶ್ನೆಗಳನ್ನು ಕೊಟ್ಟು, ಉತ್ತರಿಸಲು ಹೇಳುವರು. ಉದಾ : ಶಬ್ದ ಗ್ರಹಿಸಲು ಸಹಾಯ ಮಾಡುವ ಅಂಗ ಯಾವುದು? |
| | 10 ನಿ | | | | | ಮಕ್ಕಳು ಮಾಡಿದ ಚಟುವಟಿಕೆಯನ್ನು ಪರಿಶೀಲನೆ ಮಾಡುವರು. | | | | | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | **ಮೌಲ್ಯಮಾಪನ ಚಟುವಟಿಕೆ :**<br>ಕೆಲವು ಪ್ರಶ್ನೆಗಳನ್ನು ಸಿದ್ಧಪಡಿಸಿಕೊಂಡು ಅವುಗಳಿಗೆ ಉತ್ತರಿಸಲು ತಿಳಿಸುವರು.<br>ಉದಾ : ಶಾಲೆಯ ಆವರಣವನ್ನು ಸ್ವಚ್ಛವಾಗಿಡಲು ಏನು ಮಾಡಬೇಕು? | | | | ಸ್ವಯಂ | ಕಿರೀಟಗಳನ್ನು ಧರಿಸಿ ಜ್ಞಾನೇಂದ್ರಿಯಗಳ ಪಾತ್ರಾಭಿನಯ ಮಾಡಿಸುವರು.<br> |
| | 5 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸಿ ಮಾರ್ಗದರ್ಶನ ನೀಡುವರು. | | | | | ಪ್ರತಿಯೊಂದು ಜ್ಞಾನೇಂದ್ರಿಯದ ಬಗ್ಗೆ 2 ವಾಕ್ಯಗಳನ್ನು ಬರೆದು ತರಲು ತಿಳಿಸುವರು. |

| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ<br>ಲಚ್ಚಿಯ ಮೆಚ್ಚಿನ ದೋಣಿ | * ಸಂಯುಕ್ತಾಕ್ಷರಗಳು, ಪದಗಳು ಮತ್ತು ವಾಕ್ಯಗಳನ್ನು ನಕಲು ಮಾಡುವುದು<br>* ಭಾಷೆಯಲ್ಲಿನ ಎಲ್ಲಾ ಸ್ವರಗಳನ್ನು ಉಚ್ಚರಿಸುವುದು. | ಅಭಿನಯ ಗೀತೆ ಚಾರ್ಟು, ಪಠ್ಯಪುಸ್ತಕ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** ಅಭಿನಯ ಗೀತೆ "ದೋಣಿ"ಯನ್ನು ಪುನರಾವರ್ತಿಸುವರು | | ಬೇರೆ ಮಕ್ಕಳ ಬರವಣಿಗೆಯನ್ನು ಓದುವುದು.<br>ಒಂದು ಸರಳ ಪಠ್ಯವನ್ನು ಓದಿದ ಮೇಲೆ ಯಾರು? ಯಾವಾಗ? ಏನು? ಮತ್ತು ಎಲ್ಲಿ? ಎಂಬ ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥವಾಗುವುದು. | ಪಠ್ಯಪುಸ್ತಕ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** ಅಭಿನಯ ಗೀತೆ "ದೋಣಿ"ಯನ್ನು ಪುನರಾವರ್ತಿಸುವರು. |
| | 5 ನಿ | | | | | ಪಠ್ಯಪುಸ್ತಕದ ಪುಟಸಂಖ್ಯೆ 21 ಪುಟದ ಅಭ್ಯಾಸ ಚಟುವಟಿಕೆಯ ಮೂರನೇ ಪುಟವನ್ನು ಗುಂಡಾಗಿ ನಕಲು ಮಾಡಲು ಸೂಚಿಸುವರು. | | | | | ಮುಂದಿನ ಪಾಠಕ್ಕೆ ಅಣಿಯಾಗುವರು. |
| | 25 ನಿ | | | | ಹಿರೇಮಣಿ | ಹಿರೇಮಣಿ ಸಹಾಯದಿಂದ ಮೇಲಿನ ಚಟುವಟಿಕೆಯನ್ನು ಮಾಡಿಸುವರು. | ಕನ್ನಡ<br>ಗಗನ ಗುಡಿ | | | ಶಿಕ್ಷಕ | **ಕಲಿಕಾಂಶ :** ಮಕ್ಕಳಿಗೆ ಪದ್ಯದ ಸಾರವನ್ನು ಸರಳ ಗದ್ಯ ರೂಪದಲ್ಲಿ ಅರ್ಥೈಸಿ ಹೇಳುವುದು. |
| | 5 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು | | | | | ಅಭ್ಯಾಸ ಪ್ರಶ್ನೆಗಳಿಗೆ ಉತ್ತರಿಸಲು ಸೂಚಿಸುವರು. |
| | 25 ನಿ | | | | ಶಿಕ್ಷಕ | **ಮೌಲ್ಯಮಾಪನ ಚಟುವಟಿಕೆ**<br>ಲಚ್ಚಿಯ ಮೆಚ್ಚಿನ ದೋಣಿ ಪಾಠವನ್ನು ಮಕ್ಕಳಿಂದ ಓದಿಸುವರು ಮತ್ತು ಪುಟಸಂಖ್ಯೆ 22ರ ಅಭ್ಯಾಸ ಚಟುವಟಿಕೆಯನ್ನು ಮಾಡಿಸುವರು. | | | | ಹಿರೇಮಣಿ | ಹಿರೇಮಣಿ ಸಹಾಯದಿಂದ ಅಭ್ಯಾಸದ ಪ್ರಶ್ನೆಗಳಿಗೆ ಉತ್ತರಿಸುವರು. |
| | 10 ನಿ | | | | | ಪಾಠದಲ್ಲಿ ಬರುವ ಒತ್ತಕ್ಷರಗಳನ್ನು ಪಟ್ಟಿಮಾಡಲು ತಿಳಿಸುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| 2ನೇ | 10 ನಿ | ಕನ್ನಡ<br>ಲಚ್ಚಿಯ ಮೆಚ್ಚಿನ ದೋಣಿ | ಸಂಯುಕ್ತಾಕ್ಷರಗಳು, ಪದಗಳು ಮತ್ತು ವಾಕ್ಯಗಳನ್ನು ನಕಲು ಮಾಡುವುದು ಭಾಷೆಯಲ್ಲಿನ ಎಲ್ಲಾ ಸ್ವರಗಳನ್ನು ಉಚ್ಚರಿಸುವುದು. | ಬಣ್ಣದ ಹಾಳೆ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :**<br>3ನೇ ತರಗತಿಯ ಚಟುವಟಿಕೆಯಲ್ಲಿ ಭಾಗವಹಿಸುವರು. | ಪರಿಸರ ಅಧ್ಯಯನ<br>ನಮ್ಮ ಜ್ಞಾನೇಂದ್ರಿಯಗಳು | ದೇಹದ ಭಾಗಗಳಿಂದ ಜ್ಞಾನೇಂದ್ರಿಯಗಳನ್ನು ಗುರ್ತಿಸಲು ಮತ್ತು ಅವುಗಳ ಕಾರ್ಯಗಳನ್ನು ತಿಳಿಯುವರು. ಜ್ಞಾನೇಂದ್ರಿಯಗಳ ಸ್ವಚ್ಛತೆ ಮತ್ತು ರಕ್ಷಣೆಯ ವಿಧಾನವನ್ನು ಅರಿಯುವರು. | ಜ್ಞಾನೇಂದ್ರಿಯಗಳ<br>ಚಿತ್ರಪಟಗಳು | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :**<br>ಚುಕು ಬುಕು ಚುಕು ಬುಕು ರೈಲು ಹೊಳೆಯ ದಡದಲಿ ಆನೆಯ ಹಿಂಡು ಅಭಿನಯ ಗೀತೆಯನ್ನು ಜೊತೆಗೆ ಹಾಡುವರು. |
| | 5 ನಿ | | | | | ಮಕ್ಕಳು ಮುಂದಿನ ಪಾಠಕ್ಕೆ ಸಿದ್ಧತೆ ಮಾಡಿಕೊಳ್ಳುವರು | | | | | ಮುಂದಿನ ಚಟುವಟಿಕೆಗಳಿಗೆ ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | **ಪುನರ್ಬಲನ ಚಟುವಟಿಕೆ**<br>ಮಕ್ಕಳಿಗೆ ಬಣ್ಣದ ಹಾಳೆಗಳನ್ನು ಕೊಟ್ಟು ಮಾರ್ಗದರ್ಶನ ಮಾಡುತ್ತ ದೋಣಿಯನ್ನು ಮಾಡುವ ಚಟುವಟಿಕೆ ಮಾಡಿಸುವರು. | | | | ಹಿರೇಮಣಿ | ಮಕ್ಕಳಿಗೆ ಜ್ಞಾನೇಂದ್ರಿಯಗಳ ಚಿತ್ರಗಳು ಹಾಗೂ ಅವುಗಳ ಕಾರ್ಯಗಳನ್ನು ಕೊಟ್ಟು ಹೊಂದಿಸಲು ಹೇಳುವನು. |
| | 10 ನಿ | | | | | ಚಟುವಟಿಕೆಯ ಪರಿಶೀಲನೆ ಮಾಡುವರು. ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. | | | | | ಚಟುವಟಿಕೆಯನ್ನು ಪರಿಶೀಲನೆ ಮಾಡುವರು. |
| | 25 ನಿ | | | | ಹಿರೇಮಣಿ | ದೋಣಿ ಮಾಡುವ ಚಟುವಟಿಕೆಯನ್ನು ಮುಂದುವರೆಸುವರು. | | | | ಶಿಕ್ಷಕ | ಜ್ಞಾನೇಂದ್ರಿಯದ ಬಗ್ಗೆ ರೂಪಕವನ್ನು ಸಿದ್ಧಪಡಿಸಿ ಅಭಿನಯಿಸಲು ಹೇಳುವುದು ಹಾಗೂ ಶಿಕ್ಷಕರು ಸೂಕ್ತ ಮಾರ್ಗದರ್ಶನ ನೀಡುವರು. |
| | 5 ನಿ | | | | | ಮಕ್ಕಳು ಮಾಡಿದ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಜ್ಞಾನೇಂದ್ರಿಯಗಳನ್ನು ಚಿತ್ರಿಸಲು ಹೇಳುವರು. |

**41ನೇ ದಿನ**



| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕೆಯ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕೆಯ ಪ್ರಕ್ರಿಯೆ |
| **1** | **2** | **3** | **4** | **5** | **6** | **7** | **8** | **9** | **10** | **11** | **12** |
| 3ನೇ | 40 ನಿ | (ಲಲಿತ ಕಲೆ) ಸಂಗೀತ | ಸಪ್ತಸ್ವರಗಳನ್ನು ಪರಿಚಯಿಸುವುದು. | ಕ.ಹ. ಸ್ವರಗಳನ್ನು ಸಂಗೀತದ ಕ್ಯಾಸೆಟ್ ಮಕ್ಕಳು | ಶಿಕ್ಷಕ | ಸಪ್ತಸ್ವರಗಳಾದ ಸ,ರಿ,ಗ,ಮ,ಪ,ದ, ಮತ್ತು ನಿ ಇವುಗಳನ್ನು ಹಿಂದಿನ ತರಗತಿಯಲ್ಲಿ ಪರಿಚಯಿಸಲಾಗಿದೆ. ಆರೋಹಣ ಮತ್ತು ಅವರೋಹಣ ಕ್ರಮದಲ್ಲಿ ಹೇಳಿಕೊಡುವರು. (ಪುನರಾವರ್ತನೆ ಮಾಡಿಸುವುದು.) | ಜೀವನ ವಿಜ್ಞಾನ (ಲಲಿತ ಕಲೆ) ಸಂಗೀತ | ಸಪ್ತಸ್ವರಗಳನ್ನು ಪರಿಚಯಿಸುವುದು. | ಕಪ್ಪುಹಲಗೆ, ರೇಡಿಯೋ, ಸಂಗೀತದ ಕ್ಯಾಸೆಟ್ | ಶಿಕ್ಷಕ | 2ನೇ ತರಗತಿ ಮಕ್ಕಳ ಜೊತೆ 3ನೇ ತರಗತಿಯ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸುವರು. |
| | 40 ನಿ | ಚಿಣ್ಣರ ಚುಕ್ಕಿ | | ರೇಡಿಯೋ, ಕ.ಹಲಗೆ, ಸೀಮೆಸುಣ್ಣ | ಶಿಕ್ಷಕ | ಚಿಣ್ಣರ ಚುಕ್ಕಿ ರೇಡಿಯೋ ಕಾರ್ಯಕ್ರಮ. | ಚಿಣ್ಣರ ಚುಕ್ಕಿ | | ರೇಡಿಯೋ, ಕಪ್ಪುಹಲಗೆ, ಸೀಮೆಸುಣ್ಣ | ಶಿಕ್ಷಕ | 2ನೇ ತರಗತಿ ಮಕ್ಕಳ ಜೊತೆ ಈ ತರಗತಿ ಮಕ್ಕಳು ರೇಡಿಯೋ ಕಾರ್ಯ ಕ್ರಮದ ಚಟುವಟಿಕೆಯಲ್ಲಿ ತೊಡಗಿಸುವರು. |
| 4ನೇ | 40 ನಿ | ಜೀವನ ವಿಜ್ಞಾನ | ಮಕ್ಕಳಿಗೆ ಸಂಗೀತ ಅಭಿರುಚಿ ಬೆಳೆಸುವುದು. | ರೇಡಿಯೋ / R.C.C.P ಧ್ವನಿಮುದ್ರಿತ ಸುರಳಿ, ಕಪ್ಪುಹಲಗೆ | ಶಿಕ್ಷಕಿ | ರಾಷ್ಟ್ರೀಯ ಭಾವೈಕ್ಯತೆಯ ಗೀತೆಯಾದ "ವಂದೇ ಮಾತರಂ" ಗೀತೆಯನ್ನು ಧ್ವನಿಸುರಳಿಯಿಂದ ಕೇಳಿಸುವುದು. ನಂತರ ಶಿಕ್ಷಕರು ಸಾಹಿತ್ಯವನ್ನು ಕಪ್ಪು ಹಲಗೆಯ ಮೇಲೆ ಬರೆಯುವರು. ಬರೆದ ಸಾಹಿತ್ಯವನ್ನು ಹೇಳಿಕೊಡುವರು.<br>**<u>ರಾಷ್ಟ್ರೀಯ ಗೀತೆ</u>**<br>ವಂದೇ ಮಾತರಂ<br>ವಂದೇ ಮಾತರಂ<br>ಸುಜಲಾಂ ಸುಫಲಾಂ<br>ಮಲಯಜ ಶೀತಲಾಂ<br>ಸತ್ಯ ಶಾಮಲಾಂ<br>ವಂದೇ ಮಾತರಂ | ಜೀವನ ವಿಜ್ಞಾನ ಸಂಗೀತ | ಮಕ್ಕಳಿಗೆ ಸಂಗೀತ ಅಭಿರುಚಿ ಬೆಳೆಸುವುದು. | ರೇಡಿಯೋ / R.C.C.P ಧ್ವನಿಮುದ್ರಿತ ಸುರಳಿ, ಕಪ್ಪುಹಲಗೆ | ಶಿಕ್ಷಕ | 2ನೇ ತರಗತಿ ಮಕ್ಕಳ ಜೊತೆ 3ನೇ ತರಗತಿಯ ಮಕ್ಕಳು ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 40 ನಿ | ಮೌಲ್ಯಶಿಕ್ಷಣ | ಭಾವನೆಗಳ ಹತೋಟಿ ಕೌಶಲದ ಬಗ್ಗೆ ಅರಿವು ಮೂಡಿಸುವುದು. | ಕನ್ನಡ ಭಾಷಾ ಪುಸ್ತಕ ಮತ್ತು ನೀತಿ ಕಥೆಗಳ ಪುಸ್ತಕ | ಶಿಕ್ಷಕ/ಕಿ | 2ನೇ ತರಗತಿ ಮಕ್ಕಳ ಜೊತೆ 3ನೇ ತರಗತಿಯ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸುವರು. | ಮೌಲ್ಯಶಿಕ್ಷಣ | ಭಾವನೆಗಳ ಹತೋಟಿ ಕೌಶಲದ ಬಗ್ಗೆ ಅರಿವು ಮೂಡಿಸುವುದು. | ಕನ್ನಡ ಭಾಷಾ ಪುಸ್ತಕ ಮತ್ತು ನೀತಿಕಥೆಗಳ ಪುಸ್ತಕ | ಶಿಕ್ಷಕ | 3ನೇ ತರಗತಿಯ ಕನ್ನಡ ವಿಷಯದ ದಯಾವಂತ ರಾಜಕುಮಾರ ಈ ಪಾಠ ದಲ್ಲಿ ಬರುವ ಪಾತ್ರಗಳಲ್ಲಿ ಕಂಡುಬರುವ ದಯೆ, ಪ್ರೀತಿ, ಅಹಿಂಸೆ ಬಗ್ಗೆ ತಿಳಿಸುವರು. ಅಥವಾ<br>* ಶಿಕ್ಷಕರು ತಮಗೆ ಸಿಗುವ ಸಾಹಿತ್ಯದಿಂದ ಕಥೆಗಳನ್ನು ಮಕ್ಕಳಿಗೆ ಹೇಳುವರು. ಕಥೆಯಲ್ಲಿರುವ ದಯೆ, ಪ್ರೀತಿ ಮತ್ತು ಅಹಿಂಸೆ ತತ್ವಗಳನ್ನು ತಿಳಿಸುವರು. |

| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| **1** | **2** | **3** | **4** | **5** | **6** | **7** | **8** | **9** | **10** | **11** | **12** |
| 1ನೇ | 40 ನಿ | ಜೀವನ ವಿಜ್ಞಾನ | ಶಾರೀರಿಕ ವಿಕಸನ | | ಶಿಕ್ಷಕ | ಎರಡು ಮತ್ತು ಮೂರನೇ ತರಗತಿಯ ಮಕ್ಕಳನ್ನು ಹೊಂದಾಣಿಕೆ ಮಾಡಿಕೊಂಡು ಸಾಮೂಹಿಕ ಕವಾಯತಿನಲ್ಲಿ ತೊಡಗಿಸಿಕೊಳ್ಳುವರು. | | | | ಶಿಕ್ಷಕ | ಸಾಮೂಹಿಕ ಕವಾಯತಿನಲ್ಲಿ ಮಕ್ಕಳು ಭಾಗವಹಿಸುವರು. |
| 2ನೇ | 10 ನಿ | ಕನ್ನಡ<br>ಲಚ್ಚಿಯ ಮೆಚ್ಚಿನ ದೋಣಿ | ಸಂಯುಕ್ತಾಕ್ಷರಗಳು ಪದಗಳು ಮತ್ತು ವಾಕ್ಯಗಳನ್ನು ನಕಲು ಮಾಡುವುದು.<br>ಭಾಷೆಯಲ್ಲಿನ ಎಲ್ಲಾ ಸ್ವರಗಳನ್ನು ಉಚ್ಚರಿಸುವುದು. | ಅಭಿನಯ ಗೀತೆ, ಪಠ್ಯಪುಸ್ತಕ | ಶಿಕ್ಷಕ | <u>**ಪೂರ್ವ ಸಿದ್ಧತಾ ಚಟುವಟಿಕೆ :**</u> "ದೋಣಿ" ಅಭಿನಯ ಗೀತೆಯನ್ನು ಹಾಡಿಸುವರು. | ಕನ್ನಡ<br>ಗಗನ ಗುಡಿ | ಬೇರೆ ಮಕ್ಕಳ ಬರವಣಿಗೆಯನ್ನು ಓದುವುದು.<br>ಒಂದು ಸರಳ ಪಠ್ಯವನ್ನು ಓದಿದ ಮೇಲೆ ಯಾರು? ಯಾವಾಗ? ಏನು? ಮತ್ತು ಎಲ್ಲಿ? ಎಂಬ ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥವಾಗುವುದು. | ಅಭಿನಯ ಗೀತೆ, ಪಠ್ಯಪುಸ್ತಕ, ಪಠ್ಯಪುಸ್ತಕ ಮಿಂಚುಪಟ್ಟಿ, ಮಿಂಚುಪಟ್ಟಿ | ಶಿಕ್ಷಕ | <u>**ಪೂರ್ವ ಸಿದ್ಧತಾ ಚಟುವಟಿಕೆ :**</u> ದೋಣಿ ಅಭಿನಯ ಗೀತೆಯನ್ನು ಹಾಡಿಸುವರು. |
| | 5 ನಿ | | | | | ಮಕ್ಕಳು ನೇರ ಬೋಧನೆಗೆ ಅಣಿಗೊಳ್ಳುವರು. | | | | | ಅಭ್ಯಾಸ ಚಟುವಟಿಕೆಯನ್ನು ಮುಂದುವರಿಸಲು ಸೂಚಿಸುವರು. |
| | 25 ನಿ | | | | ಶಿಕ್ಷಕ | <u>**ಮೌಲ್ಯಮಾಪನ :**</u> ಶಿಕ್ಷಕರು ಭಾಷಾಭ್ಯಾಸ ಮತ್ತು ಭಾಷಾ ಚಟುವಟಿಕೆಯನ್ನು ಮಾಡಿಸುವರು. ಮಕ್ಕಳ ಚಟುವಟಿಕೆಯನ್ನು ಶಿಕ್ಷಕರು ಗಮನಿಸುವರು. | | | | ಹಿರೇಮಣಿ | ಹಿರೇಮಣಿ ಸಹಾಯದಿಂದ ಅಭ್ಯಾಸ ಚಟುವಟಿಕೆಯನ್ನು ಮುಂದುವರೆಸಲು ಸೂಚನೆ ನೀಡುವರು. |
| | 5 ನಿ | | | | | ಪಠ್ಯಪುಸ್ತಕದಲ್ಲಿ ದೋಣಿ ಚಿತ್ರಕ್ಕೆ ಬಣ್ಣಹಚ್ಚಿ, ಅದರ ಬಗ್ಗೆ 2-3 ವಾಕ್ಯಗಳನ್ನು ಬರೆಯಲು ಹಿರೇಮಣಿಗೆ ಸೂಚಿಸುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| | 25 ನಿ | | | | ಹಿರೇಮಣಿ | ಶಿಕ್ಷಕರ ಸೂಚನೆಯಂತೆ ಹಿರೇಮಣಿ ನೇತೃತ್ವದಲ್ಲಿ ಮಕ್ಕಳು ದೋಣಿ ಚಿತ್ರಕ್ಕೆ ಬಣ್ಣಹಚ್ಚಿ, ಅದರ ಬಗ್ಗೆ 2-3 ವಾಕ್ಯಗಳಲ್ಲಿ ಬರೆಯುವರು. | | | | ಶಿಕ್ಷಕ | ಭಾಷಾ ಚಟುವಟಿಕೆಯಲ್ಲಿರುವ ಧ್ವನಿ ವ್ಯತ್ಯಾಸವನ್ನು ಮಕ್ಕಳಿಗೆ ತಿಳಿಸಿ ಓದಲು ಹೇಳುವರು. |
| | 10 ನಿ | | | | | ಈ ಮೇಲಿನ ಚಟುವಟಿಕೆಯನ್ನು ಶಿಕ್ಷಕರು ಪರಿಶೀಲಿಸುವರು. | | | | | ಮೇಲಿನ ಚಟುವಟಿಕೆಯನ್ನು ಮುಂದುವರಿಸುವರು.<br>**ಉದಾ :** ಅರಡಿದ - ಹರಡಿದ, ಕಾಲು - ಕಾಳು |
| 3ನೇ | 40 ನಿಮಿಷ | ಲಲಿತಕಲೆ | ಸುತ್ತಲಿನ ಪರಿಸರವನ್ನು ವೀಕ್ಷಿಸಿ ಸರಳವಾದ ವಸ್ತು ಚಿತ್ರಗಳನ್ನು ಬಿಡಿಸುವುದು. | ಸೀಸದ ಕಡ್ಡಿ, ರಬ್ಬರ್, ಕಾಗದ, ಕಾರ್ಡ್‌ಬೋರ್ಡ್, ಬಣ್ಣ ಮತ್ತು ಅಂಟು. | ಶಿಕ್ಷಕ | <u>**ಚಟುವಟಿಕೆ :**</u> ಎಲೆಯ ಚಿತ್ರ ಬರೆಯಿಸುವುದು, ಮನೆಯ ಚಿತ್ರಗಳನ್ನು ಪೆನ್ಸಿಲ್‌ನಿಂದ ಬರೆಯುವರು. ಅದಕ್ಕೆ ಸಂಬಂಧಿಸಿದಂತೆ ಬಣ್ಣಗಳನ್ನು ಹಚ್ಚಲು ಹೇಳುವರು. ಶಿಕ್ಷಕರು ಮಾರ್ಗದರ್ಶನದಲ್ಲಿ ಈ ಚಟುವಟಿಕೆ ನಡೆಸುವುದು. ಉದಾ : ಎಲೆಗೆ ಹಸಿರು ಬಣ್ಣ ಹಚ್ಚುವರು. | ಲಲಿತಕಲೆ | ಸುತ್ತಲಿನ ಪರಿಸರವನ್ನು ವೀಕ್ಷಿಸಿ ಸರಳವಾದ ವಸ್ತು ಚಿತ್ರಗಳನ್ನು ಬಿಡಿಸುವುದು. | ಸೀಸದ ಕಡ್ಡಿ, ರಬ್ಬರ್, ಕಾಗದ, ಕಾರ್ಡ್‌ಬೋರ್ಡ್, ಬಣ್ಣ ಮತ್ತು ಅಂಟು. | ಶಿಕ್ಷಕ | 2ನೇ ತರಗತಿಯ ಮಕ್ಕಳ ಜೊತೆ 3ನೇ ತರಗತಿಯ ಮಕ್ಕಳನ್ನು ಈ ಚಟುವಟಿಕೆಯಲ್ಲಿ ತೊಡಗಿಸುವರು. |
| | 40 ನಿಮಿಷ | ಸಾ.ಉ.ಉ.ಕಾ. | ಸಮಾಜದ ಸ್ವಾಸ್ತಕ್ಕೆ ಸಾಮಾಜಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುವುದರ ಅಗತ್ಯವನ್ನು ಅರಿಯುವರು. | | ಶಿಕ್ಷಕ | ಶಾಲೆಯಲ್ಲಿ ಆಚರಿಸುವ ಹಬ್ಬ, ಸಮಾರಂಭಗಳಲ್ಲಿ ತನ್ನ ಶಾಲಾವರಣವನ್ನು ಸ್ವಚ್ಛಗೊಳಿಸುವರು.<br>ಮತ್ತೊಂದು ಗುಂಪು ತಳಿರು ತೋರಣಗಳಿಂದ ಶಾಲೆಯ ಅಲಂಕರಿಸುವುದರ ಮೂಲಕ ಹಿರಿಯ ವಿದ್ಯಾರ್ಥಿಗಳಿಗೆ ಸಹಕರಿಸುವಂತೆ ಮಾಡುವರು.<br>ಮೂರನೇ ಗುಂಪು ಬೆಂಚು, ಕುರ್ಚಿ, ಜಮಖಾನ ಹಾಕುವುದರಲ್ಲಿ ಸಹಕರಿಸುವಂತೆ ಮಾಡುವರು.<br>ಹೀಗೆ ಒಂದು ವ್ಯವಸ್ಥಿತ ಕಾರ್ಯಕ್ರಮ ರೂಪುಗೊಳ್ಳಲು ಪ್ರತಿಯೊಬ್ಬರು ಸಮಾಜಸೇವಾ ಕಾರ್ಯದ ಮಹತ್ವವನ್ನು ಈ ಅವಧಿಯಲ್ಲಿ ತಿಳಿಸುವರು. | ಸಾ.ಉ.ಉ.ಕಾ. | ಸಮಾಜದ ಸ್ವಾತ್ತಕ್ಕೆ ಸಾಮಾಜಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುವುದರ ಮೂಲಕ ಅಗತ್ಯವನ್ನು ಅರಿಯುವರು. | | ಶಿಕ್ಷಕ | ಈ ತರಗತಿಯ ಮಕ್ಕಳು ಕೂಡ 2ನೇ ತರಗತಿಯ ಮಕ್ಕಳ ಜೊತೆಯಲ್ಲಿ ಚಟುವಟಿಕೆಯಲ್ಲಿ ತೊಡಗಿಸುವರು. |

43ನೇ ದಿನ



| | | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಕಲಿಕಾ ಹಂತ | ಸಾಮರ್ಥ್ಯದ ವಿವರ | ಬೋಧನೋಪಕರಣ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಕಲಿಕಾ ಹಂತ | ಸಾಮರ್ಥ್ಯದ ವಿವರ | ಬೋಧನೋಪಕರಣ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ ಹಾವಿನ ಹಾಡು | ಹಾಡು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವರು. | ಅಭಿನಯ ಗೀತೆಯ ಚಾರ್ಟ್, ಫ್ಲಾಷ್-ಕಾರ್ಡುಗಳು ಮುಂತಾದವು | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** ಚುಕ್ ಬುಕ್ ರೈಲು ಬಂತು ಅಭಿನಯ ಗೀತೆಯನ್ನು ಹಾಡಿಸುವರು. | ಕನ್ನಡ ಗಗನ ಗುಡಿ | ಬೇರೆ ಮಕ್ಕಳ ಬರವಣಿಗೆಯನ್ನು ಓದುವರು. ಒಂದು ಸಲ ಪದ್ಯವನ್ನು ಓದಿದ ಮೇಲೆ ಯಾರು? ಯಾವಾಗ? ಏನು? ಮತ್ತು ಎಲ್ಲಿ? ಎಂಬ ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥರಾಗುವರು. | ಅಭಿನಯ ಗೀತೆಯ ಚಾರ್ಟ್, ಪದ್ಯಪುಸ್ತಕ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** ಚುಕ್‌ಬುಕ್ ರೈಲು ಬಂತು ಅಭಿನಯ ಗೀತೆಯನ್ನು ಹಾಡಿಸುವರು. |
| | 5 ನಿ | | | | | ಮುಂದಿನ ಪಾಠಕ್ಕೆ ಅಣಿಯಾಗಲು ಸೂಚಿಸುವರು. | | | | | ಮುಂದಿನ ಪಾಠಕ್ಕೆ ಮಕ್ಕಳನ್ನು ಸಿದ್ಧಗೊಳಿಸುವರು. |
| | 25 ನಿ | | | | ಹಿರೇಮಣಿ | **ಕಲಿಕಾಂಶ :** 'ಹಾವಿನ ಹಾಡು' ಪದ್ಯವನ್ನು ರಾಗಬದ್ಧವಾಗಿ ಅಭಿನಯದೊಂದಿಗೆ ಒಂದೊಂದೇ ಸಾಲನ್ನು ಹೇಳಿಕೊಟ್ಟು ಮಕ್ಕಳಿಂದ ಅನುಕರಿಸಲು ಹೇಳುವರು. | | | | ಶಿಕ್ಷಕ | **ಮೌಲ್ಯಮಾಪನ :** ಪಠ್ಯಪುಸ್ತಕದಲ್ಲಿನ ಅಭ್ಯಾಸದ ಚಟುವಟಿಕೆಯನ್ನು ಮಾಡಿಸುವರು. |
| | 5 ನಿ | | | | | ಶಿಕ್ಷಕರು ಹಾಡಿದಂತಹ ಈ ಮೇಲಿನ 'ಹಾವಿನ ಹಾಡು' ಪದ್ಯವನ್ನು ಹಿರೇಮಣಿ ಸಹಾಯದಿಂದ ಬರೆಯಲು ಸೂಚಿಸುವರು. | | | | | ಹಿರೇಮಣಿಗೆ ಭಾಷಾಭ್ಯಾಸದ ಚಟುವಟಿಕೆಯನ್ನು ಮಾಡಿಸಲು ತಿಳಿಸುವರು. |
| | 25 ನಿ | | | | ಶಿಕ್ಷಕ | ಶಿಕ್ಷಕರ ಸೂಚನೆಯಂತೆ ಹಿರೇಮಣಿ ನೇತೃತ್ವದಲ್ಲಿ ಹಾವಿನಹಾಡು ಪದ್ಯವನ್ನು ಮಕ್ಕಳು ಹೇಳುತ್ತಾ ನಕಲು ಮಾಡಿಸುವರು. | | | | ಹಿರೇಮಣಿ | ಹಿರೇಮಣಿ ಸಹಾಯದಿಂದ ಭಾಷಾಭ್ಯಾಸ ಚಟುವಟಿಕೆ ಮುಂದುವರೆಸಲು ಸೂಚಿಸುವರು. |
| | 10 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| 2ನೇ | 10 ನಿ | ಗಣಿತ ಸಂಖ್ಯೆಗಳು | ಕ್ರಮಾಗತ ಸಂಖ್ಯೆಗಳು ಮತ್ತು ಕ್ರಮ ಸೂಚಕಗಳನ್ನು ಗುರುತಿಸುವರು. | ಮಕ್ಕಳು, ಬಳಪ, ಕಪ್ಪುಹಲಗೆ, ಪೆನ್ಸಿಲ್, ಪೇಪರ್ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** "ಒಂದು ಒಂದು ಎರಡು ಒಳ್ಳೆಯ ಸುದ್ದಿ ಹರಡು" ಅಭಿನಯ ಗೀತೆಯನ್ನು ಹಾಡಿಸುವರು. | ಗಣಿತ ಸಂಕಲನ | * ಮೊತ್ತವು 999ಕ್ಕೆ ಮೀರದಂತೆ ದಶಕವಿಲ್ಲದ ಹಾಗು ದಶಕವಿರುವ ಹಾಗೆ ಮೂರು ಅಂಕಿಗಳುಳ್ಳ ಎರಡು ಅಥವಾ ಮೂರು ಸಂಖ್ಯೆಗಳ ಸಂಕಲನ ಮಾಡುವರು. * ನಿತ್ಯ ಜೀವನದ ಸರಳ ಸಂಕಲನದ ಸಮಸ್ಯೆಗಳನ್ನು ಬಿಡಿಸುವರು. | ಕಡ್ಡಿಗಳು, ಗೋಲಿಗಳು, ಕಪ್ಪುಹಲಗೆ, ಸಂಖ್ಯಾಫಲಕಗಳು | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** ಎರಡನೆಯ ತರಗತಿ ಮಕ್ಕಳ ಜೊತೆಯಲ್ಲಿಯೇ ಚಟುವಟಿಕೆಯಲ್ಲಿ ತೊಡಗಿಸುವರು. |
| | 5 ನಿ | | | | | ಹಿಂದಿನ ಅವಧಿಯಲ್ಲಿ ಮಾಡಿಸಿದ ಚಟುವಟಿಕೆಯನ್ನು ಮುಂದುವರಿಸಲು ಹಿರೇಮಣಿಗೆ ಸೂಚಿಸುವರು. | | | | | ಮುಂದಿನ ಚಟುವಟಿಕೆಗೆ ಮಕ್ಕಳು ಅಣಿಯಾಗುವರು. |
| | 25 ನಿ | | | | ಹಿರೇಮಣಿ | ಹಿಂದಿನ ದಿನ ಗಣಿತದ ಅವಧಿಯಲ್ಲಿ ಮಾಡಿಸಿದ ಚಟುವಟಿಕೆಯನ್ನು ಮಾಡಿಸುವರು. | | | | ಶಿಕ್ಷಕ | **ಕಲಿಕಾಂಶ ಚಟುವಟಿಕೆ :** ಪ.ಪು.ದ. ಪುಸಂ. 54 ಹಾಗು 55ರಲ್ಲಿರುವ ವಿಸ್ತರಣಾ ಕ್ರಮದಲ್ಲಿ ದಶಕವಿರುವ ಸಂಕಲನ ಲೆಕ್ಕಗಳನ್ನು ಕಪ್ಪು ಹಲಗೆಯ ಮೇಲೆ ಮಾಡಿ ತೋರಿಸುವರು. |
| | 10 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಪು.ಸಂ. 54, 55ರಲ್ಲಿನ ಚಟುವಟಿಕೆ ಮಾಡಿಸಲು ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | **ಮೌಲ್ಯಮಾಪನ ಚಟುವಟಿಕೆ :** ವಾರದ ದಿನಗಳ ಬಗ್ಗೆ ಮಕ್ಕಳನ್ನು ಪ್ರಶ್ನಿಸುವರು. ಉದಾ : ವಾರದಲ್ಲಿ 5ನೇ ದಿನ ಯಾವ ವಾರ? 2ನೇ ದಿನ ಯಾವ ವಾರ? ಬುಧವಾರ ವಾರದ ಎಷ್ಟನೇ ದಿನ? ಈ ರೀತಿ ಪ್ರಶ್ನೆಗಳನ್ನು ಮಕ್ಕಳಿಗೆ ಕೇಳುವರು. | | | | ಹಿರೇಮಣಿ | ಶಿಕ್ಷಕರು ಮಾಡಿಸಿದ ಮೇಲಿನ ಚಟುವಟಿಕೆಯನ್ನು ಮುಂದುವರಿಸಿಕೊಂಡು ಹೋಗುವರು. |
| | 5 ನಿ | | | | | | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |

## 43ನೇ ದಿನ

| ಅವಧಿ | ಸಮಯ ನಿಮಿಷ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 40 | ಲಲಿತಕಲೆ (ಸಂಗೀತ) | ಮಕ್ಕಳಿಗೆ ಶಿಶುಗೀತೆಯನ್ನು ಹೇಳಿ-ಕೊಡುವುದು. | ಮಕ್ಕಳು | ತಂಡ | ಶಿಶುಗೀತೆ - 1 ಶಾಲೆ ಸುತ್ತ ಸಸಿನೆಟ್ಟು ............. ನಿತ್ಯ ನೀರು ಗೊಬ್ಬರ ಕೊಟ್ಟು, ಬೆಳೆಸಿದ ಮರವ ಅಪ್ಪಿಯೇ ಬಿಟ್ಟ. ಪರಿಸರ ಪ್ರೇಮಿ ಪುಟ್ಟ.<br>ಶಿಶುಗೀತೆ - 2<br>ಕೂಗಿ ಹೇಳಿತು ಕೋಳಿ<br>ಮಕ್ಕಳೆ ಬೇಗನೆ ಏಳಿ<br>ಪರೀಕ್ಷೆ ಬಂದಿತು ಹತ್ತಿರ<br>ಕಲಿಯಿರಿ ಪ್ರಶ್ನೆಗೆ ಉತ್ತರ<br>ಈ ಅಭಿನಯ ಗೀತೆಯಗಳನ್ನು ಹೇಳಿಕೊಡುವರು. | ಲಲಿತಕಲೆ ಸಂಗೀತ | ಸಪ್ತ ಸ್ವರಗಳನ್ನು ಪರಿಚಯಿಸುವುದು. | ಚಪ್ಪಾಳೆಗೆ, ರೇಡಿಯೋ ಸಂಗೀತದ ಕ್ಯಾಸೆಟ್ | ತಂಡ | ಎರಡನೇ ತರಗತಿಯ ಮಕ್ಕಳ ಜೊತೆಯಲ್ಲಿ ಮೂರನೇ ತರಗತಿಯ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸುವರು. |
| | 40 ನಿ | ಚಿನ್ನರ ಚುಕ್ಕಿ | | ರೇಡಿಯೋ. ಕ. ಶಾಲೆಗೆ ಒದಗಿಸಿದ | ತಂಡ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ | ಚಿನ್ನರ ಚುಕ್ಕಿ | | ರೇಡಿಯೋ. ಕ. ಶಾಲೆಗೆ ಒದಗಿಸಿದ | ತಂಡ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ |
| 4ನೇ | 10 ನಿ | ಪರಿಸರ ಅಧ್ಯಯನ ನಮ್ಮ ದೇಹದ ಭಾಗಗಳು | ದೇಹದ ಅಂಗಗಳನ್ನು ಗುರುತಿಸುವರು ಮತ್ತು ಅವುಗಳ ಕೆಲಸಗಳನ್ನು ತಿಳಿಯುವರು. | ಕೈ ಭಾಗಗಳನ್ನು ತೋರಿಸುವ ಚಿತ್ರ | ತಂಡ | **ಪೂರ್ವ ಸಿದ್ಧತಾ ಚಟುವಟಿಕೆ :**<br>ಹೆಬ್ಬೆರಳು, ತೋರುಬೆರಳು ಸೇರಿಕೊಂಡು ಕುಣಿಯುತ್ತಿತ್ತು. ತೈಯತಕ್ಕ ತೈಯತಕ್ಕ ಅಭಿನಯ ಗೀತೆಯನ್ನು ಹೇಳಿಕೊಡುವರು. | ಪರಿಸರ ಅಧ್ಯಯನ ನಮ್ಮ ಹಲ್ಲುಗಳು | ವಿವಿಧ ರೀತಿಯ ಹಲ್ಲುಗಳನ್ನು ಗುರ್ತಿಸುವರು. ಹಲ್ಲುಗಳ ಕಾರ್ಯ, ಸ್ವಚ್ಛತೆ ಮತ್ತು ರಕ್ಷಣೆಯ ವಿಧಾನಗಳನ್ನು ಅರಿಯುವರು. | ಹಣ್ಣುಗಳ ತುಂಡುಗಳನ್ನು ಕೊಡುವುದು.<br>ವಿವಿಧ ಹಲ್ಲುಗಳನ್ನು ತೋರಿಸುವ ಚಾರ್ಟ್ | ತಂಡ | **ಪೂರ್ವ ಸಿದ್ಧತಾ ಚಟುವಟಿಕೆ :**<br>ಈ ತರಗತಿ ಮಕ್ಕಳು 2ನೇ ತರಗತಿ ಮಕ್ಕಳ ಜೊತೆ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 5 ನಿ | | | | | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. | | | | | ಮಕ್ಕಳನ್ನು ಮುಂದಿನ ಪಾಠಕ್ಕೆ ಅಣಿಗೊಳಿಸುವರು. |
| | 25 ನಿ | | | | ವೈಯಕ್ತಿಕ | ಮಕ್ಕಳಿಂದ ಕೈಗಳನ್ನು ಉಪಯೋಗಿಸಿ ಮಾಡುವ ಚಟುವಟಿಕೆಗಳನ್ನು ಪಟ್ಟಿ ಮಾಡಿಸುವರು. | | | | ತಂಡ | **ಕಲಿಕಾಂಶ :** ಎಲ್ಲಾ ಮಕ್ಕಳಿಗೂ ತಿನ್ನಲು ಹಣ್ಣಿನ ತುಂಡನ್ನು ಕೊಟ್ಟು ತಿನ್ನಲು ಹೇಳುವರು. ಹಾಗೂ ಮಕ್ಕಳು ತಿಂದ ನಂತರ ಹೇಗೆ ತಿಂದರು? ಎನ್ನುವುದನ್ನು ಚರ್ಚಿಸುತ್ತಾ ಅನುಭವಗಳನ್ನು ತಿಳಿದುಕೊಳ್ಳುತ್ತ ಹಲ್ಲುಗಳ ವಿಚಾರ ಗಳನ್ನು ತಿಳಿಸುವರು. |
| | 10 ನಿ | | | | | ಮಕ್ಕಳನ್ನು ಮುಂದಿನ ಪಾಠಕ್ಕೆ ಅಣಿಗೊಳಿಸುವರು. | | | | | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. |
| | 25 ನಿ | | | | ತಂಡ | **ಕಲಿಕಾಂಶ ಚಟುವಟಿಕೆ :** ಹಿಂದಿನ ಅವಧಿಯಲ್ಲಿ ಮಗುವು ಮಾಡಿರುವ ಚಟುವಟಿಕೆಯನ್ನು ಆದರಿಸಿ ಕೈಯಿಂದ ಮಾಡುವ ಕೆಲಸಗಳನ್ನು ಮೌಖಿಕವಾಗಿ ಕೇಳಿ ಪಟ್ಟಿ ಮಾಡಿಸುವರು. ಕೈ ಭಾಗಗಳ ಬಗ್ಗೆ ಪರಿಚಯಿಸುವರು. | | | | ವೈಯಕ್ತಿಕ | ಹಲ್ಲುಗಳ ವಿಧ ಮತ್ತು ಕಾರ್ಯಗಳನ್ನು ಪಟ್ಟಿಮಾಡಿಸುವರು. |
| | 5 ನಿ | | | | | ಒಂದು ಹಾಳೆಯ ಮೇಲೆ ಕೈ ಚಿತ್ರವನ್ನು ಬಿಡಿಸಿ ಬೆರಳುಗಳನ್ನು ಹೆಸರಿಸಿ. ಎಂದು ಹೇಳುವರು. | | | | | ಮಕ್ಕಳು ಮಾಡಿದ ಕಾರ್ಯಗಳ ಪರಿಶೀಲನೆ ಮಾಡಿ ಮಾರ್ಗದರ್ಶನ ನೀಡುವರು. |